ಅಲ್ಲದೆ ಈಗಾಗಲೇ ಅವರಿಗೆ ಜಾಸ್ತಿ ಕೊಡುತ್ತಾ ಇದ್ದಾರೆ. ಆದ್ದರಿಂದ ಅವರ ತಿದ್ದುಪಡಿಯನ್ನು ವಿರೋಧಿಸುತ್ತೇವೆ. ನಾನ್ ಗೆಜೆಟೆಡ್ ರ್‍ಯಾಂಕ್‌ನಲ್ಲಿ ಅದರಲ್ಲೂ ಕೂಡ ಕೆಳಗಿನ ದರ್ಜೆಯವರಿಗೆ ಈಗ ಎಷ್ಟರಮಟ್ಟಿನ ತೊಂದರೆಯಾಗುತ್ತಿದೆ ಎಂಬುದನ್ನು ಆಗಲೇ ಹೇಳಿದ್ದಾರೆ. ಅಲ್ಲದೆ ಅನೇಕ ಪತ್ರಿಕೆಗಳಲ್ಲೂ ಸಹ ಬರುತ್ತಾ ಇದೆ. ಪ್ರಜಾವಾಣಿಯಲ್ಲೂ ಕೆಲವು ಸಂಸಾರಗಳ ಆದಾಯ ವೆಚ್ಚವನ್ನು ಚೆನ್ನಾಗಿ ಕೊಟ್ಟಿದ್ದಾರೆ. ಇದಕ್ಕೆ ಅವರನ್ನು ಅಭಿನಂದಿಸಬೇಕಾಗಿದೆ. ಬರೀ ಮಾತಿನಲ್ಲಿ ಇದನ್ನು ಒತ್ತಿ ಹೇಳಿದರೆ ತೀರ್ಮಾನ ಮಾಡಿದ ಹಾಗಾಗುವುದಿಲ್ಲ; ಮುಖ್ಯವಾಗಿ ಮನಸ್ಸಿರಬೇಕು. ಆ ತರಗತಿಗಳವರ ಆರ್ಥಿಕ ದುಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ ಯುದ್ಧಕಾಲಕ್ಕಿಂತ ಯುದ್ಧಾನಂತರ ದಿನೇ ದಿನೇ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಾ ಇದೆ. ಈಗ ರೈಲ್ವೆಯವರಿಗೆ ಸುಮಾರು 50 ರೂಪಾಯಿ ತುಟ್ಟಿಭತ್ಯ ಬರುತ್ತಾ ಇದೆ. ಅದೇ ರೀತಿ ಪೋಸ್ಟಲ್ ಇಲಾಖೆ, ಇನ್‌ಕಂಟ್ಯಾಕ್ಸ್, ಮತ್ತು ಸೆಂಟ್ರಲ್ ಎಕ್ಸೈಜ್ ಇಲಾಖೆಗಳಿಗೂ ಸಹ ಬರುತ್ತಾ ಇದೆ. ನಾವು ಒಬ್ಬ ಮನುಷ್ಯನಿಗೆ ಅವನ ಸಂಬಳ ನಿರ್ಧರ ಮಾಡಬೇಕಾಗಿದ್ದರೆ ಅವನು ಕೇಂದ್ರ ಸರ್ಕಾರಕ್ಕೆ ಸೇರಿದವನು ಅಥವಾ ಸ್ಥಳೀಯ ಸರ್ಕಾರಕ್ಕೆ ಸೇರಿದವನು ಎಂಬ ವ್ಯತ್ಯಾಸವನ್ನಿಟ್ಟುಕೊಂಡು ತೀರ್ಮಾನ ಮಾಡಿದರೆ ಅತನಿಗೆ ಅನ್ಯಾಯವಾಗುತ್ತದೆ. ಅವನ ಜೀವನ ನಡೆಯುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ನಿರ್ಧರ ಮಾಡಿ ಅದಕ್ಕೆ ಕಡಿಮೆ ಇಲ್ಲದಂತೆ ಕೊಡತಕ್ಕದ್ದು ನಮ್ಮ ಧರ್ಮ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಅವರು ಒಂದು ದೊಡ್ಡ ನೀತಿಯನ್ನು ಹಾಕಿಕೊಂಡಿದ್ದರು. ಆಗ ಅವರು ನಾವು ಅಧಿಕಾರಕ್ಕೆ ಬಂದಕೂಡಲೇ 30 ರೂಪಾಯಿಗಿಂತ ಕಡಿಮೆ ಸಂಬಳ ಯಾರಿಗೂ ಇಲ್ಲದಂತೆಯೂ ಮತ್ತು 500 ರೂಪಾಯಿಗಿಂತ ಜಾಸ್ತಿ ಸಂಬಳ ಯಾರಿಗೂ ಕೊಡದಂತೆಯೂ ಮಾಡುತ್ತೇವೆಂದು ಹೇಳುತ್ತಿದ್ದರು. 1943 ರಲ್ಲಿ 1,000 ರೂಪಾಯಿಗಿಂತ ಜಾಸ್ತಿ ಸಂಬಳ ಇರಕೂಡದು, 20 ರೂಪಾಯಿಗಿಂತ ಕಡಿಮೆ ಸಂಬಳ ಇರಕೂಡದು ಎಂಬುದಾಗಿ ಒಂದು ನಿರ್ಣಯ ಬಂದಾಗ ಅದು ತೀವ್ರವಾಗಿ ವಿರೋಧಿಸಲ್ಪಟ್ಟದ್ದರಿಂದ ಬಿದ್ದುಹೋಯಿತು. ಆಗ ಇಪ್ಪತ್ತು ರೂಪಾಯಿ ನಿಗದಿ ಮಾಡಬೇಕೆಂದು ಹೇಳುತ್ತಿದ್ದವರು ಆಗಿನ ಪರಿಸ್ಥಿತಿಯನ್ನೂ ಈಗಿನ ಪರಿಸ್ಥಿತಿಯನ್ನೂ ಯೋಚನೆ ಮಾಡಿ ಈಗ ಯಾವ ಮಟ್ಟದಲ್ಲಿ ನಿಗದಿ ಮಾಡಬೇಕೆಂಬುದನ್ನು ತಾವೇ ನಿರ್ಧರಿಸಿ. ಈಗ 30 ರೂಪಾಯಿ ಬರುವವನಿಗೆ 60 ರೂಪಾಯಿ ಆದರೂ ನಿಗದಿ ಮಾಡಬೇಕು. ಈ ವಿಚಾರದಲ್ಲಿ ಒಂದು ತಿದ್ದುಪಡಿ ತರಬೇಕೆಂದು ನನಗೆ ಇಚ್ಛೆ ಇತ್ತು. ಒಬ್ಬನಿಗೆ ಇರಬೇಕಾದ ಸಂಬಳ ಎಷ್ಟಿರಬೇಕೆಂಬುದನ್ನು ಕಡ್ಡಾಯವಾಗಿ ನಿರ್ಧರ ಮಾಡಬೇಕಾದರೆ 40 ರೂಪಾಯಿಗಳಾದರೂ ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಈಗ ಬೇರೆ ಕಡೆಗಳಲ್ಲಿ ನೌಕರರಿಗೆ ಎಂದರೆ ಕಡಿಮೆ ದರ್ಜೆಯವರಿಗೆ 70-80-90 ರೂಪಾಯಿಗಳವರೆಗೂ ಬರುತ್ತಾ ಇದೆ. ಮೈಸೂರು ದೇಶದಲ್ಲಿ ಮಾತ್ರ ಬಹಳ ಕಡಿಮೆ ಸಿಕ್ಕುತ್ತಿದೆ. ಕೇಂದ್ರ ಸರ್ಕಾರದವರು ರೈಲ್ವೆ ಇಲಾಖೆಯ ನೌಕರರಿಗೆ ಗ್ರೈನ್ ಅಲೋಯೆನ್ಸ್ ಬೇರೆ ಕೊಡುತ್ತಾ ಇದ್ದಾರೆ; ಹಿಂದಿನ ಧಾರಣೆಯಂತೆಯೇ ಆಹಾರ ಧಾನ್ಯಗಳನ್ನು ಸರಬರಾಯಿ ಮಾಡುತ್ತಾರೆ. ಅವರಿಗೆ ಇಷ್ಟೆಲ್ಲಾ ಅನುಕೂಲ ಇದೆ. ಆದ್ದರಿಂದ ನಮ್ಮ ದೇಶದ ಆದಾಯವನ್ನು ಕಿತ್ತುಕೊಂಡು ಅವರು ಬೇರೆ ರೀತಿಯಲ್ಲಿ ಅವರ ನೌಕರರಿಗೆ ಹೆಚ್ಚು ರಿಯಾಯಿತಿಗಳನ್ನು ಕಲ್ಪಿಸಿಕೊಟ್ಟರೆ ನಮ್ಮ ದೇಶದಲ್ಲಿ ಅವರ ಮೇಲೆ ಅಸಮಾಧಾನವುಂಟಾಗುತ್ತದೆಂದು ಹೇಳಬೇಕಾಗಿದೆ.

ಇನ್ನೊಂದು ವಿಚಾರ. ಮಾನ್ಯ ಶ್ರೀ ಚಂದ್ರಶೇಖರಯ್ಯನವರು ಈ ನಿರ್ಣಯವನ್ನು ತಂದಿದ್ದಾರೆ. ಇದನ್ನು

ನಾನು ಅನುಮೋದಿಸುವುದಕ್ಕಿಂತ ಮುಂಚೆ ಒಂದೆರಡು ವಿಚಾರಗಳನ್ನು ಹೇಳಬೇಕೆಂದು ಇದ್ದೇನೆ. ಕೆಲವು ಕಾಲದ ಹಿಂದೆ ಅವರು ಮಂತ್ರಿ ಮಂಡಲದಲ್ಲಿದ್ದರು. ಆಗ ಈ ರೀತಿ ಮಂತ್ರಿ ಮಂಡಲದಲ್ಲಿ ಒತ್ತಾಯಮಾಡಿದರೆ ಅಥವಾ ಒಂದು ವಿರೋಧಾಭಿಪ್ರಾಯಬಂದಾಗ ಅದನ್ನು ವಿರೋಧಿಸುತ್ತಿದ್ದರೇ ಎಂಬುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಅದನ್ನು ಹೇಳಿದ್ದರೆ ಚೆನ್ನಾಗಿತ್ತು. ಅವರು ಮಂತ್ರಿಮಂಡಲದಿಂದ ಈಚೆಗೆ ಬಂದಮೇಲೆ ಇದನ್ನು ತಂದಿದ್ದಾರೆ. ಇನ್ನೊಂದು ಅಂಶ ಏನೆಂದರೆ ಈಗ ಚುನಾವಣೆ ಬೇರೆ ಹತ್ತಿರ ಬಂತು. ಬಂದ ಮೇಲೆ ಇದನ್ನು

....

ಅಧ್ಯಕ್ಷರು.—ಎಲ್ಲದಕ್ಕೂ ಒಂದು ಉದ್ದೇಶವನ್ನು ಆರೋಪಿಸುವುದು ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಚುನಾವಣೆ ಕಾಲದಲ್ಲಿ ಈ ರೀತಿ ಒಂದು ನಿರ್ಣಯ ತಂದಿದ್ದೇವೆ ಎಂದು ಹೇಳಿಕೊಳ್ಳಬಹುದು. ಅದರಿಂದ ಖಂಡಿತ ಉಪಯೋಗವಿಲ್ಲ, ಬರೀ ಬಾಯಿಮಾತಿನಲ್ಲಿ ಹೇಳಿದರೆ ಪ್ರಯೋಜನವಿಲ್ಲ, ಈ ನಿರ್ಣಯವನ್ನು ಖಂಡಿತ ಅವರು ವಾಪಸು ತೆಗೆದುಕೊಳ್ಳಬಾರದು. ನಾವು ಯಾವುದನ್ನು ಮಾಡಲೀ ಆತ್ಮಸಾಕ್ಷಿಯಾಗಿ ಮಾಡುತ್ತೇವೆ. ವಿರೋಧಿಸುವುದನ್ನು ವಿರೋಸುತ್ತೇವೆ, ಬೆಂಬಲ ಕೊಡಬೇಕಾದ್ದಕ್ಕೆ ಬೆಂಬಲ ಕೊಡುತ್ತೇವೆ. ನಿಮ್ಮ ಹಾಗೆ ಒಂದು ಹೇಳಿ ಆಮೇಲೆ ಹಿಂದಕ್ಕೆ ಕಾಲು ತೆಗೆಯುವುದಿಲ್ಲ. ಆದ್ದರಿಂದ ಶ್ರೀಮಾನ್ ಚಂದ್ರಶೇಖರಯ್ಯನವರು ನಿಜವಾಗಿಯೂ ಈ ನಿರ್ಣಯದ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಇದನ್ನು ಕಡ್ಡಾಯವಾಗಿ ಓಟಿಗೆ ಹಾಕಿ ಜಾರಿಗೆ ತರುವುದಕ್ಕೆ ಎಷ್ಟು ಬೇಕೋ ಅಷ್ಟು ಒತ್ತಾಯ ಸರ್ಕಾರದ ಮೇಲೆ ಮಾಡುತ್ತಾರೆಂದು ನಿರೀಕ್ಷಿಸುತ್ತೇನೆ. ಆ ಷರತ್ತಿನ ಮೇಲೆ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಮಾನ್ಯಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಚಂದ್ರಶೇಖರಯ್ಯನವರು ಬಹಳ ಮುಖ್ಯವಾದ ಈ ಒಂದು ವಿಷಯವನ್ನು ಸಭೆಯ ಮುಂದಿಟ್ಟಿದ್ದಾರೆ. ಈಗ ತುಟ್ಟಿಭತ್ಯವನ್ನು ಹೆಚ್ಚುಮಾಡುವುದು ಎಷ್ಟು ಅವಶ್ಯಕ ವಾಗಿದೆಯೆಂಬುದನ್ನು ಅವರು ಬಹಳ ದೀರ್ಘವಾಗಿ ಪುಷ್ಟೀಕರಿಸಿದರು. ಈಗ ಕೊಡತಕ್ಕದ್ದು ಎಷ್ಟುಮಟ್ಟಿಗೆ ಸಾಲದು, ಜೀವನದ ಖರ್ಚಿನ ಮಟ್ಟ ಎಷ್ಟು ಹೆಚ್ಚಿದೆ ಎಂಬುದನ್ನೂ ಕೂಡ...............

Sri D. H. CHANDRASEKHARAIYA.—Can I reply after the Hon'ble Minister concludes?

Rajamantrapravina H. B. GUNDAPPA GOWDA (Hassan District—General).—The procedure is, the mover of the resolution will reply first and then the Government.

Mr. SPEAKER.—The relevant Standing Order reads as follows :

"The mover of a substantive motion may speak a second time on the conclusion of the debate by way of reply, and if the motion is moved by a non-official member, the Minister in-charge of the department to which the matter relates shall have the right of speaking after the mover has replied whether he has previously spoken in the debate or not.

The Hon'ble Sri H. C. DASAPPA.—If he wants to reply, let him exercise the right now.

Sri D. H. CHANDRASEKHARAIYA.—Yes. Let me have my say now.

ನಾನು ಹೆಚ್ಚಾಗಿ ಹೇಳಬೇಕಾದುದೇನೂ ಇಲ್ಲ. ಈ ನಿರ್ಣಯಕ್ಕೆ ಬೆಂಬಲ ಕೊಟ್ಟಿರತಕ್ಕ ಎಲ್ಲಾ ಮಾನ್ಯ ಸದಸ್ಯರನ್ನೂ ನಾನು ವಂದಿಸಬೇಕಾಗಿದೆ. ಶ್ರೀಮಾನ್ ವಿ. ಎಸ್. ನಾರಾಯಣರಾಯರು ತಂದಿರುವ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಏಕೆಂದರೆ ಬೇರೆ ಬೇರೆ ಸ್ಥಳದಲ್ಲಿರತಕ್ಕ ನೌಕರರಿಗೆ ಅವರು ಸೂಚಿಸಿರುವಂತೆ ವ್ಯತ್ಯಾಸವನ್ನು ತೋರಿಸಬೇಕೆಂಬ ಉದ್ದೇಶ ನನಗಿಲ್ಲ. ಒಂದೇ ಒಂದು ತತ್ವವನ್ನು ಅನ್ವಯಿಸುವುದು ಸಾಧುವಾದುದೆಂದು ನನ್ನ ನಂಬಿಕೆ. ಶ್ರೀಮಾನ್ ಬಿ. ಹುಚ್ಚೇಗೌಡರು ತಮ್ಮ ಭಾಷಣದಲ್ಲಿ ನಾನು ಮಂತ್ರಿಯಾಗಿದ್ದಾಗ ಈ ವಿಚಾರದಲ್ಲಿ ಏನು ಮಾಡಿದಿರಿ ಎಂದು ಕೇಳಿದರು. ಮತ್ತು ಈಗ ಈ ನಿರ್ಣಯವನ್ನು ತಂದಿರುವುದಕ್ಕೆ ಒಂದು ಒಳ ಉದ್ದೇಶವನ್ನೂ ಕೂಡ ಕಲ್ಪನೆ ಮಾಡಿದರು. ಆದರೆ ಈ ರೀತಿ ಉದ್ದೇಶ ಕಲ್ಪಿಸಿ ಆರೋಪಿಸುವುದು ಅಷ್ಟು ಮೇಲ್ಮಟ್ಟದ ಮಾರ್ಗವಲ್ಲ. ಯಾವ ವಿಷಯವನ್ನಾದರೂ ಅದರ ಸತ್ಯಾಂಶಗಳ ದೃಷ್ಟಿಯಿಂದಲೇ ಪರಿಶೀಲಿಸುವುದು ಯೋಗ್ಯವಾದುದು. ನಾನು ಮಂತ್ರಿಮಂಡಲದಲ್ಲಿರುವಾಗ್ಯೆ ಸಂಬಳದ ಹೊಸ ದರ್ಜೆಗಳನ್ನು ಜಾರಿಗೆ ಕೊಟ್ಟವರಲ್ಲಿ ನಾನು ಒಬ್ಬವನಾಗಿದ್ದೆ. ಆ ಕಾಲದಲ್ಲಿ ನಾನು ಸಣ್ಣಪುಟ್ಟ ನೌಕರರ ವಿಚಾರದಲ್ಲಿ ಎಷ್ಟು ಸಹಾನುಭೂತಿ ತೋರಿಸುತ್ತಿದ್ದೆನೆಂಬುದು ಮತ್ತೆ ಯಾವ ರೀತಿ ಸಹಾಯ ಮಾಡುತ್ತಿದ್ದೆನೆಂಬುದು ಆ ನೌಕರರಿಗೇ ಗೊತ್ತಿದೆ. ಈ ವಿಷಯ ಶ್ರೀಮಾನ್ ಹುಚ್ಚೇಗೌಡರಿಗೆ ತಿಳಿದಂತೆ ಕಾಣುವುದಿಲ್ಲ. ಈ ನಿರ್ಣಯವನ್ನು ಸೂಚಿಸಿ ಚುನಾವಣೆಗೆ ಆಗಲಿ ಅಥವಾ ಬೇರೆ ಯಾವುದಕ್ಕಾಗಲಿ ಸಹಾಯ ಹೊಂದಬೇಕೆಂಬ ಉದ್ದೇಶ ನನಗಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇದರಿಂದ ಸಣ್ಣ ಪುಟ್ಟ ನೌಕರರಿಗೆ ಅನುಕೂಲವಾದರೆ ನನಗೆ ಅಷ್ಟೇ ಸಂತೋಷ. ಸಾಕಾಗಿದೆ.

ಈ ನಿರ್ಣಯದ ವಿಚಾರದಲ್ಲಿ ನಾನು ಏನು ಮಾಡುತ್ತೇನೆಂಬುದನ್ನು ಈಗಲೇ ಹೇಳಲಾರೆ. ಮಾನ್ಯ ಮಂತ್ರಿಗಳು ಜವಾಬು ಹೇಳಿದನಂತರ ನನ್ನ ಅಭಿಪ್ರಾಯವನ್ನು ಸೂಚಿಸಲು ಅವಕಾಶವಿರುವುದೆಂದು ಭಾವಿಸಿರುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸ್ವಾಮಿ, ಇಷ್ಟು ಹೇಳುವುದಕ್ಕೆ ಮಾನ್ಯ ಸದಸ್ಯರು ಅನೇಕ ಕಾರಣಗಳನ್ನು ತಿಳಿಸಿದರು. ಇದು ಅಗತ್ಯವಿರಲಿಲ್ಲವೆಂದು ಕಾಣುತ್ತದೆ. ಸಾಧಾರಣವಾಗಿ, ಕಾರಣಗಳನ್ನು ಮಂಡಿಸುವುದು ಯಾವಾಗ ಎಂದರೆ ವಿಚಾರಗಳು ಒಬ್ಬರ ತಿಳಿವಳಿಕೆಗೆ ಬಾರದೇಹೋದರೆ ಅಥವ ಬೇರೆ ಅಭಿಪ್ರಾಯ ಉಳ್ಳವರಾಗಿದ್ದರೆ. ಇಲ್ಲಿ ಹಾಗಿಲ್ಲವಾದುದರಿಂದ ಆ ಶ್ರಮ ಅನಾವಶ್ಯಕವಾಗಿತ್ತು. ಎಲ್ಲರಿಗೂ ಕಷ್ಟಕಾಲವೆಂಬುದು ಗೊತ್ತೇ ಇದೆ. ಹೀಗಿರುವಾಗ ನಾನ್‌ಗೆಜೆಟೆಡ್ ಆಫೀಸರುಗಳಿಗೆ ಹಣದ ಉಬ್ಬರದಿಂದಲೂ ಪದಾರ್ಥಗಳ ಬೆಲೆ ಹೆಚ್ಚಿರುವುದರಿಂದಲೂ ಕಷ್ಟವಾಗಿದೆ ಎಂಬುದನ್ನು ಯಾರೂ ಇಲ್ಲ ಎನ್ನುವಹಾಗಿಲ್ಲ. ಒಂದು ಪ್ರಶ್ನೆಗೆ ಇದೇರೀತಿ ಉತ್ತರವನ್ನು ಹೇಳಿದ್ದೇನೆ. ಈಗ ಎಲ್ಲಿಹೋದರೂ ನಮಗಿರುವ ತೊಂದರೆಯೇನೆಂದರ ತುಟ್ಟಿ ಭತ್ಯವನ್ನು ಹೆಚ್ಚಿಸುವುದಕ್ಕೆ ಸಾಧ್ಯವೆ ಎಂಬುದು ಪ್ರಶ್ನೆ. ಇದನ್ನು ಈಗಿನ

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು).

ಹಣಕಾಸಿನ ಸ್ಥಿತಿ ವಿಚಾರವನ್ನೇ ಆಧಾರವಾಗಿಟ್ಟು ಕೊಂಡು ತೀರ್ಮಾನ ಮಾಡಬಹುದು ಮತ್ತು ಇನ್ನು ಕೆಲವರು ಮಾತನಾಡುವುದಕ್ಕೆ ಅವಕಾಶವಿದ್ದರೂ ಹೇಳ ಬಹುದು, ಆದರೆ ಇದಕ್ಕೆ ಅವಕಾಶವಿಲ್ಲ. ನಮ್ಮ ಜನ ಜೀವನದ ಮಟ್ಟ ಹೇಗಿದೆ ಎಂಬುದನ್ನು ನೋಡಿ ಅದನ್ನು ಸರ್ಕಾರದ ಸಂಬಳ ಪಡೆಯುವವರ ಜೀವನಮಟ್ಟಕ್ಕೆ ಹೋಲಿಸಿ ನೋಡಿ ನಿಜವಾಗಿಯೂ ಸಾಮಾನ್ಯ ಜನರಿಗಿಂತ ಇವರ ಸ್ಥಿತಿ ಬಹಳ ಕಡಿಮೆ ಮಟ್ಟದಲ್ಲಿದೆಯೆ, ಕೆಟ್ಟುಹೋಗಿದೆಯೇ ಎಂಬುದನ್ನು ವಿಮರ್ಶೆ ಮಾಡಿದರೆ ಬಹುಶಃ ಒಂದೇ ಅಭಿಪ್ರಾಯ ಬರದೇಯಿರ ಬಹುದು, ಭಿನ್ನಾಭಿಪ್ರಾಯ ಬರಬಹುದು. ಈ ಸಂದರ್ಭದಲ್ಲಂತೂ ಭಿನ್ನಾಭಿಪ್ರಾಯ ಬರಬಹುದೆಂಬುದು ಇದುವರೆಗೆ ಮಾತನಾಡಿರುವ ಧ್ವನಿಯಿಂದ ಕಂಡುಬರುತ್ತದೆ. ಆದುದರಿಂದ ಈ ವಿಮರ್ಶೆಯ ಗೋಜಿಗೆ ನಾನು ಈಗ ಹೋಗುವುದಿಲ್ಲ.

1945 ರಲ್ಲಿದ್ದುದಕ್ಕಿಂತ ಶೇಕಡ 50ರಷ್ಟು ತುಟ್ಟಿ ಭತ್ಯವನ್ನು 1946ರಲ್ಲಿ ಹೆಚ್ಚು ಮಾಡಿದೆವು. ನಿಜ, ಈಗ ಅಲ್ಲಿಂದೀಚೆಗೆ ಎಷ್ಟೋಮಟ್ಟಿಗೆ ಪದಾರ್ಥಗಳ ಬೆಲೆಗಳು ಹೆಚ್ಚಿ ಜೀವನದ ವೆಚ್ಚ ಹೆಚ್ಚಿರುವುದರಿಂದ ಅದಕ್ಕನು ಗುಣವಾಗಿ ತುಟ್ಟಿ ಭತ್ಯವನ್ನು ಹೆಚ್ಚಿಸಬಹುದಾಗಿತ್ತು. ಸಂಬಳ ಹಿಂದಿದ್ದಷ್ಟೇ ಇದ್ದಿದ್ದರೆ ತುಟ್ಟಿಭತ್ಯವನ್ನು ಹೆಚ್ಚಿಸಬೇಕಾಗಿತ್ತೆಂಬುದನ್ನು ಖಂಡಿತವಾಗಿ ಒಪ್ಪುತ್ತೇನೆ. ಆದರೆ 1947ನೆಯ ಇಸವಿಯಲ್ಲಿ ಬೇಸಿಕ್ ಸ್ಕ್ಯಾಲರಿ ಎಂದರೆ ಮೂಲ ಸಂಬಳವನ್ನೇ ಹೆಚ್ಚು ಮಾಡಿದೆವು. ಕಾಸ್ಟ್ ಆಫ್ ಲಿವಿಂಗ್ 160 ಎಂದಿಟ್ಟು ಕೊಂಡು ಮೂಲ ಸಂಬಳವನ್ನೇ ಅದಕ್ಕೆ ತಕ್ಕಂತೆ ಹೆಚ್ಚು ಮಾಡಿದೆವು. ಇದರ ಮೇಲೂ ಈಗ ಹೆಚ್ಚಿಸಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಪೇ ರಿವಿಜನ್ ಕಮಿಟಿ ರಿಪೋರ್ಟಿನ 49ನೆಯ ಪುಟವನ್ನು ನೋಡಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—49ನೆಯ ಪುಟದಲ್ಲಿ ಹೇಳಿರುವುದರ ವಿಚಾರದಲ್ಲಿ ನಾನು ಎರಡು ಮಾತು ಹೇಳಬೇಕಾಗಿದೆ. ಅಲ್ಲಿ ಹೀಗೆ ಹೇಳಿದ್ದಾರೆ:

"Assuming that the existing rates represented what Government then considered to be the utmost that they could afford to grant, we consider that even...the enhancement of the basic scales of pay recommended by us which would represent a level of 160 per cent, no reduction in the existing rates of Dearness Allowance can be suggested."

ಆಗ ಏನೊಂದು ವಾದ ಬಂದಿತೆಂದರೆ, ಬೇಸಿಕ್ ಸ್ಕೇಲ್ ಆಫ್ ಪೇ ಹೆಚ್ಚು ಮಾಡಿರುವುದರಿಂದ ತುಟ್ಟಿಭತ್ಯವನ್ನು ಏಕೆ ಕಡಿಮೆ ಮಾಡಬಾರದೆಂಬ ವಾದ ಬಂದಿತು. ಅದಕ್ಕೇ ಅವರು ಅದನ್ನು ಕಡಿಮೆ ಮಾಡುವುದು ಅಗತ್ಯ ವಿಲ್ಲವೆಂದು ಹೇಳಿರುವುದು. ಆಮೇಲೆ

"In stating so, we have not overlooked the fact that in the case of the lower paid employees the basic pay recommended together with the existing rates of Dearness Allowance may appear to be far higher than what they were formerly getting."

ಬೇಸಿಕ್ ಸ್ಕೇಲ್ ಹೆಚ್ಚಿಸಿದಾಗ ಏನು ಪರಿಣಾಮವಾಯಿತೆಂದರೆ ಹಿಂದೆ ಬರುತ್ತಿದ್ದುದಕ್ಕಿಂತ ಬೇಸಿಕ್ ಸ್ಕೇಲ್ ಮತ್ತು ತುಟ್ಟಿ ಭತ್ಯ ಸೇರಿಸಿದರೆ ಒಂದು ಜಂಪ್ ಸಿಕ್ಕಿದ ಹಾಗಾಯಿತು. ಇದು ಸುಲಭವಾಗಿ ಅರ್ಥವಾಗುತ್ತದೆ. ನಾನು ಇದನ್ನು ಸಮರ್ಥಿಸಲು ಬೇಕಾದರೆ ಅಂಕಿಅಂಶಗಳನ್ನು ಕೊಡಬಲ್ಲೆ, ಇದು ನಿರ್ವಿವಾದವಾದ ವಿಚಾರ...................

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—17 ನೆಯ ಪ್ಯಾರಾ ನೋಡಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನೂ ಹೇಳುತ್ತೇನೆ.

"For the reasons mentioned already in para 17 of Chapter II, we consider that in their cases the payment of the present Dearness Allowance with the basic pay recommended is not at all in excess of their minimum requirements."

ಈಗ ಕೊಡುತ್ತಿರುವ ತುಟ್ಟಿಭತ್ಯವನ್ನು ಸಂಬಳದ ಜೊತೆಗೆ ಸೇರಿಸಿದರೆ ಅಷ್ಟೇನೂ ಅಧಿಕವಾಗಿ ಕೊಡುತ್ತಿಲ್ಲವೆಂಬ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ. ಇನ್ನು 28ನೆಯ ಪುಟದಲ್ಲಿ ಏನು ಹೇಳಿದ್ದಾರೆಂದರೆ,...

Sri D. H. CHANDRASEKHARAIYA.—Please read para 17. Even at that time some enhancement in Dearness Allowance was considered necessary but as an alternative the committee suggested the payment of a lumpsum bonus of one month's pay.

The Hon'ble Sri H. C. DASAPPA.—How can lumpsum allowance ever be an alternative to enhanced Dearness Allowance? I do not understand that point.

Sri D. H. CHANDRASEKHARAIYA.—That is what the committee have stated.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—They may say, ಅದಕ್ಕೆ ಉತ್ತರ ಕೊಡುತ್ತೇನೆ. ಅವರು ಒಂದು ತಿಂಗಳ ಸಂಬಳವನ್ನು ಲಂಪ್‌ಸಂ ಆಗಿ ಕೊಡಿ ಎಂದು ಹೇಳಿದರು. ಅದಕ್ಕೆ ಮುಂಚೆ ಒಂದು ತಿಂಗಳ ಸಂಬಳವನ್ನು ಕೊಟ್ಟಿದ್ದರು.

Sri D. H. CHANDRASEKHARAIYA.—It was recovered.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎರಡನೆಯ ಸಾರಿ ಕೊಟ್ಟದ್ದನ್ನು ಕ್ರಮೇಣ ವಸೂಲು ಮಾಡಿಕೊಂಡರು. ಒಂದು ತಿಂಗಳ ಸಂಬಳವೆಂದರೆ ಸುಮಾರು 35–40 ಲಕ್ಷ ರೂಪಾಯಿ ಆಗುತ್ತದೆ. ಯಾರಾದರೂ ಒಂದು ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಡಿ ಎಂದು ಸರ್ಕಾರಿ ಆಡಳಿತದಲ್ಲಿ ಕೇಳಬಹುದೆ, ಅದು ಒಂದು ನೀತಿಯೆ ಮಾನ್ಯ ಸದಸ್ಯರೇ ಹೇಳಲಿ. ಅವರೇನೋ ಒಂದು ತಿಂಗಳ ಸಂಬಳವನ್ನು ಲಂಪ್‌ಸಂ ಆಗಿ ಕೊಡಿ ಎಂದು ಹೇಳಿದರು, ಆ ನೀತಿಯೇ ಸರಿಯಲ್ಲವೆಂದು ಸ್ಪಷ್ಟವಾಗಿ ನಾನು ಹೇಳಿದ್ದೇನೆ. ಅವರೇನೋ ಶ್ರಮಪಟ್ಟು ವರದಿಯನ್ನು ಮಾಡಿದ್ದಾರೆ. ಆದರೆ ಅವರು ಮಾಡಿದ ಸಲಹೆಯನ್ನೆಲ್ಲಾ ಸರ್ಕಾರ ಒಪ್ಪಿಕೊಂಡಿಲ್ಲ. ಈ ಒಂದು ವಿಷಯದಲ್ಲಿ ಆ ನೀತಿ ಸರಿಯಲ್ಲವೆಂದು ಬಹುಶಃ ಮಾನ್ಯ ಸದಸ್ಯರೂ ಅಭಿಪ್ರಾಯಪಟ್ಟಿರಬಹುದೆಂದು ನನ್ನ ಭಾವನೆ.

I can understand there is some virtue in what the Hon'ble Member

Sri D. H. Chandrasekharaiya states. Bonus, I cannot understand. It is not a good principle in Government but only in industrial concerns for stepping production, to create incentive motive, and so on. Let us forget it. It is not worthwhile considering it.

Sri D. H. CHANDRASEKHARAIYA.—Will not the Hon'ble Minister accept the fact that even at the time of submitting the report the committee stated that some enhancement in the rates of Dearness Allowance was necessary ?

The Hon'ble Sri H. C. DASAPPA.—They have not stated so.

Sri D. H. CHANDRASEKHARAIYA.—This is what they have stated in para 77.

"It is, therefore, urged that some enhancement in the rates of Dearness Allowance is necessary."

The Hon'ble Sri H. C. DASAPPA.—It is not the opinion of the Committee. The meaning is clear. The non-gazetted staff had urged.

Sri D. H. CHANDRASEKHARAIYA.—The final view of the Committee is expressed as follows :

"Considering all aspects of the question we feel that there is some force in this representation and that some further relief is called for. Of the two alternatives we consider the latter, *viz.*, the grant of a lumpsum bonus of one month's pay as on 31st December 1946 is more desirable from all points of view."

That did not alter the fact that some enhancement in dearness allowance was considered necessary at the time.

The Hon'ble Sri H. C. DASAPPA.—It is not a case of their admitting that enhancement of dearness allowance was necessary.

ಅವರು ಇನ್ನೊಂದು ವಿಷಯ ಹೇಳಿದರು, ಆರು ಆರು ತಿಂಗಳಿಗೂ ಈ ವಿಷಯವನ್ನು ಪರಿಶೀಲನೆಮಾಡಿ ನೋಡುತ್ತಿರಬೇಕು ಎಂದು. ಹೀಗೆ ಆರು.ಆರು ತಿಂಗಳಿಗೂ ನೋಡಬೇಕು ಎಂದರೆ, 6-6 ತಿಂಗಳಿಗೂ ನಮ್ಮ ಬಡ್ಜೆಟ್ಟಿನ ಪರಿಸ್ಥಿತಿ ಬದಲಾವಣೆಯಾಗುತ್ತದೆಯೇ ? ಅಥವಾ ಆಗ ನೋಡಿ ನಮ್ಮ ಬಡ್ಜೆಟ್ಟಿನ ಅಂಕಿಗಳನ್ನು ತಲೆಕೆಳಗು ಮಾಡುವುದಕ್ಕಾಗುತ್ತದೆಯೇ ! ನಮ್ಮ ಪರಿಸ್ಥಿತಿ ಹೇಗಿದೆ, ಬಾಕಿಕಡೆ ಜನಜೀವನದ ಮಟ್ಟ ಹೇಗಿದೆಯೆಂಬದನ್ನು ನೋಡಬೇಕೇ ಹೊರತು, ಅದನ್ನು ಬಿಟ್ಟು ಈ ರೀತಿಯಾಗಿ ಮಾಡುತ್ತಾ ಹೋದರೆ ಅದರ ಪರಿಣಾಮವೇನಾಗುತ್ತದೆಂಬದನ್ನು ನೀವೇ ಯೋಚನೆಮಾಡಿ.

ಈ ಸರ್ಕಾರಿ ನೌಕರಿಯಲ್ಲಿರುವ ಇನ್ನೂ ಒಂದು ಮುಖ್ಯ ವಿಷಯವನ್ನು ತಾವುಗಳು ಮನಗಾಣಬೇಕು. ಇದರಲ್ಲಿ ಅನುಕೂಲ, ಒಂದು ಬಗೆಯಲ್ಲಿ ಜೀವನದ ಭದ್ರತೆ, ಸುಖವಿದೆಯೆಂಬದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂಬದನ್ನು ನಂಬಿದ್ದೇನೆ. ಜೀವನದ ಪ್ರಶ್ನೆಯೇ ಅಲ್ಲದೆ, ಪೆರ್ಮನೆಂಟಾಗಿ ಕೆಲವು ಕಾಂಪೆನ್ಸೇಟರಿ ವಿಷಯಗಳೂ ಇವೆ. ಇದೆಲ್ಲಾ ಹೇಳಿ ಅವರಿಗೆ ಹೆಚ್ಚಾಗಿ ಸಹಾಯ ಮಾಡಕೂಡದೆಂದು ನಾನು ಹೇಳುತ್ತಿಲ್ಲ. ಅಲ್ಲದೆ ಇವತ್ತಿನ ದಿವಸ ಈ ತೆರದ (ಸರ್ಕಾರಿ) ಕೆಲಸಗಳಿಗೆ ಎಷ್ಟು ಜನ ಬರುತ್ತಿದ್ದಾರೆಂಬದನ್ನೂ ತಾವು ಸ್ವಲ್ಪ ನೋಡುವುದಾದರೆ, ನಾವು ಕೊಡುವ ಸಂಬಳ ಅಷ್ಟು ತೀರಾ ಕಡಮೆಯಾಗಿದ್ದರೆ ಆ ರೀತಿಯಾಗಿ ಯಾರೂ ಬರುತ್ತಲೇ ಇರಲಿಲ್ಲ. ಈ ಪ್ರಶ್ನೆಯನ್ನೂ ಒಂದು ವಿಧದಲ್ಲಿ Law of ಕಾಂಪೆನ್ಸೇಟರಿ Supply ತತ್ವ ರೀತಿಯಲ್ಲೂ ನೋಡಬೇಕು. ಜನಗಳೇ ಅದರಲ್ಲೂ ಕೆಲಸಕ್ಕೆ ಪೂರ್ಣ ಅರ್ಹತೆಯನ್ನು ಪಡೆದಿರುವವರು ನಾವು ಕೊಡುವ ಸಂಬಳಕ್ಕೊಪ್ಪಿ ತಾವಾಗಿ ಈ ಕೆಲಸಕ್ಕೆ ಹೆಚ್ಚು ಹೆಚ್ಚಾಗಿ ಬರುತ್ತಿರುವಲ್ಲಿ, ನಾವು ಅವರಿಗೆ ಇನ್ನೂ ಹೆಚ್ಚಿಗೆ ಕೊಡುತ್ತೇವೆಂದು ಹೇಳುವುದರ ಔಚಿತ್ಯವನ್ನೂ ಮಾನ್ಯ ಸದಸ್ಯರು ಗಮನಿಸಬೇಕು. ನಾನು ಸುಮ್ಮನೆ ಮುಚ್ಚುಮರೆಯಲ್ಲಿ ಏನಾದರೂ ಹೇಳಿ ಜನಗಳಿಗೆ ಸಂತೋಷಪಡಿಸುವುದಕ್ಕೆ ನಾನು ಮಾತಾಡುವವನಲ್ಲ. ವಸ್ತುತಃ ಇರುವ ಪರಿಸ್ಥಿತಿಯನ್ನು ತಿಳಿದುಕೊಂಡು ಮಾತನಾಡಬೇಕೇ ಹೊರತು ಅಷ್ಟು ಲಾಘವಾಗಿ ಇಂಥ ಗಮನಾರ್ಹವಾದ ವಿಚಾರಗಳನ್ನು ನೋಡಕೂಡದೆಂದು ನಾನು ಮಾನ್ಯ ಸದಸ್ಯರನ್ನು ಪ್ರಾರ್ಥಿಸುತ್ತೇನೆ.

ಮತ್ತೊಂದು ವಿಚಾರ. ಕೇಂದ್ರದಲ್ಲಿರುವ ನೌಕರರಿಗೂ ನಮ್ಮ ನೌಕರರಿಗೂ ಇರುವ ವ್ಯತ್ಯಾಸವನ್ನು ಮಾನ್ಯ ಸದಸ್ಯರು ಸೂಚಿಸಿದರು. ನಮ್ಮಲ್ಲಿರುವ ನಾನ್‌-ಗೆಜೆಟೆಡ್‌ ನೌಕರರ ಸಂಖ್ಯೆ 40,000 ವೆಂದು ಅವರು ಒಂದು ಲೆಕ್ಕ ಹೇಳಿದರು. ಇದರಲ್ಲಿ ಪ್ರೈಮರಿ ಸ್ಕೂಲು ಮೇಷ್ಟರು ಇವೆಲ್ಲ ಸೇರಿರಲಾರದು. ಆದರೆ ನಿಜವಾದ ಅಂಕಿಗಳನ್ನು ನೋಡುವುದಾದರೆ, ನಮ್ಮಲ್ಲಿ ವಿಶ್ವವಿದ್ಯಾನಿಲಯ ಮತ್ತು ಕೈಗಾರಿಕಾ ಕಾರ್ಖಾನೆಗಳನ್ನು ಬಿಟ್ಟೇ 87,406 ಜನರಿದ್ದಾರೆ. ಇದರ ಜೊತೆಗೆ ವಿಶ್ವವಿದ್ಯಾನಿಲಯದವರನ್ನೂ ಸೇರಿಸಿಕೊಂಡರೆ 88,888 ಆಗುತ್ತದೆ. ಜೊತೆಗೆ ಕೈಗಾರಿಕಾ ಕಾರ್ಖಾನೆಗಳವರನ್ನು ಸೇರಿಸಿಕೊಂಡರೆ ಇನ್ನೂ ಎಷ್ಟೋ ಆಗುತ್ತದೆ. ಆದ್ದರಿಂದ ಇವರುಗಳಿಗೆಲ್ಲಾ ಚಂದ್ರಶೇಖರಯ್ಯನವರು ಹೇಳಿದಂತೆ 50% ಅಲ್ಲ, 5 ರೂಪಾಯಿಗಳನ್ನು ಕೊಟ್ಟರೂ 50 ಲಕ್ಷ ರೂಪಾಯಿ ಆಗಿಬಿಡುತ್ತದೆ. ಆದ್ದರಿಂದ ಈ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯವೇ ! ಆದೂ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ನಿಜವಾಗಿಯೂ ಹೆಚ್ಚಿಸಬಹುದೇ ಎಂಬದನ್ನು ಯೋಚಿಸಬೇಕು. ಅಂದಮಾತ್ರಕ್ಕೇ ಸರ್ಕಾರದವರು ಈ ಪ್ರಶ್ನೆಯನ್ನು ಯೋಚನೆ ಮಾಡುವುದಿಲ್ಲವೆಂದು ನಾನು ಹೇಳುವುದಿಲ್ಲ. ಮುಖ್ಯವಾಗಿ ಇರತಕ್ಕ ಪರಿಸ್ಥಿತಿಯನ್ನು ತಮಗೆ ತಿಳಿಸಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಸಾವಿರ ರೂಪಾಯಿ ಸಂಬಳ ಬರುವವರಿಗೆ ಕಡಿಮೆಮಾಡಿ, ಈ ಬಡನೌಕರರಿಗೆ ಕೊಡಿ.

ಮಾನ್ಯ ಶ್ರೀ ಎಚ್‌. ಸಿ. ದಾಸಪ್ಪನವರು.—ಸಾವಿರ ರೂಪಾಯಿ ಸಂಬಳದ ನೌಕರರನ್ನು ಕಡಿಮೆ ಮಾಡಿದರೇನೋ ಬಹಳ ಹಣ ಕಡಿಮೆಯಾಗುತ್ತದೆಂದು ಹೇಳಿದರು. ಮಾನ್ಯ ಸದಸ್ಯರು ಹೇಳಿದಂತೆ ರಿಟ್ರೆಂಚ್‌ಮೆಂಟ್‌ ಮಾಡಬೇಕೆಂಬ ತತ್ವವನ್ನು ಒಪ್ಪುತ್ತೇನೆ, ಆದರೆ ಹೀಗೆ ಅಲ್ಲೊಂದು ಇಲ್ಲೊಂದು ತೆಗೆದುಬಿಟ್ಟು ಸ್ವಲ್ಪ ಹಣ ಉಳಿಸಿದ್ದರಿಂದ ಈ ದೊಡ್ಡ ಸೈನ್ಯಕ್ಕೆ ಏನು ಪರಿಹಾರ........................

ಶ್ರೀ ಎಸ್. ರಂಗರಾಯರು.—ಸಮುದ್ರದಲ್ಲಿ ಒಂದು ಉಪ್ಪಿನ ಹರಳು ತೇಲಿಬಿಟ್ಟಂತಾಗುತ್ತದೆ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಶ್ರೀಮಾನ್ ರಂಗರಾಯರು ಹೇಳುವುದೇನೋ ನಿಜ. ಆದರೂ ಈ ವಿಚಾರವನ್ನು ಯೋಚನೆ ಮಾಡುತ್ತೇನೆ.

ಇನ್ನೊಂದು ಪ್ರಶ್ನೆ ಏನು ಬಂತೆಂದರೆ, ಗೆಜೆಟೆಡ್ ಆಫೀಸರುಗಳಿಗೇಕೆ ತುಟ್ಟಿಭತ್ಯ ಕೊಡುತ್ತಿದ್ದೀರಿ ಎಂದು. ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಎಲ್ಲಾ ಒಟ್ಟಿಗೆ ಗೆಜೆಟೆಡ್ ಆಫೀಸರುಗಳಿಗೆ ಕೊಡುವುದನ್ನು ಸೇರಿಸಿಕೊಂಡರೂ 10—15 ಲಕ್ಷ ರೂಪಾಯಿಗಳಾಗಬಹುದು. ಅದೂ ಗೆಜೆಟೆಡ್ ಆಫೀಸರುಗಳಲ್ಲಿ ನಾವು ಕೊಡುತ್ತಿರುವುದು 800 ರೂಪಾಯಿಗಳವರೆಗೆ ಮಾತ್ರ. ಇಷ್ಟು ಉಬ್ಬರವಾಗಿರುವಾಗ ಅವರಿಗೂ ಸ್ವಲ್ಪ ಕೊಟ್ಟು ಸಹಾಯಮಾಡಿದರೆ ಅವರಿಗೂ ಅಸಮಾಧಾನವಾಗುವುದಿಲ್ಲವೆಂಬುದನ್ನು ನಾವು ಯೋಚನೆಮಾಡಬೇಕು. ಅಲ್ಲದೆ ಎಷ್ಟುತಾನೆ ನಾವು ಹೆಚ್ಚಿಗೆ ಕೊಟ್ಟಿರುವುದು? ನಾನ್ ಗೆಜೆಟೆಡ್ ನೌಕರರಿಗೆ ತುಟ್ಟಿಭತ್ಯ ಜಾಸ್ತಿ ಮಾಡಿರುವುದರಲ್ಲಿ ಕೆಲವರಿಗೆ ಶೇಕಡ 60ರಷ್ಟು ಜಾಸ್ತಿಯಾಗಿದೆ, ಕೆಲವರಿಗೆ 40ರಷ್ಟು ಜಾಸ್ತಿಯಾಗಿದೆ. ಆದರೆ ಗೆಜೆಟೆಡ್ ಅಧಿಕಾರಿಗಳಿಗೆ ಜಾಸ್ತಿಯಾಗಿರುವುದು ಕೇವಲ ಬಹಳ ಕಮ್ಮಿ ಇದೇನೂ ಹೆಚ್ಚಲ್ಲ.

ಆಮೇಲೆ ಕೇಂದ್ರಕ್ಕೆ ಕೆಲವು ಇಲಾಖೆಗಳನ್ನು ತೆಗೆದುಕೊಂಡದ್ದರಿಂದ ಉಂಟಾದ ಪರಿಣಾಮವನ್ನು ಹೇಳುತ್ತೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳಿದ್ದನ್ನು ಒಪ್ಪಬೇಕು. ಯಾವಾಗ ಈ ವಿಲೀನೀಕರಣವಾಯಿತೋ ಆಗ ನಮ್ಮಲ್ಲಿರುವ ನೌಕರರುಗಳಲ್ಲಿ ಕೆಲವರು ಕೇಂದ್ರಕ್ಕೆ ಹೋಗಿ ಅಲ್ಲಿ ಹೆಚ್ಚಾಗಿ ತುಟ್ಟಿಭತ್ಯವನ್ನು ಪಡೆದರೆಂದು ಇಲ್ಲಿರುವ ನೌಕರರಿಗೆ ಸ್ವಲ್ಪಮಟ್ಟಿಗೆ ಅಸಮಾಧಾನವಾಗುತ್ತಿದೆ. ಇದರಿಂದ ಒಂದು ಸೈಕಲಾಜಿಕಲ್ ಇಫೆಕ್ಟ್ ಇರುತ್ತದೆ. ಹೀಗೆ ನಮ್ಮಲ್ಲಿರುವ ತುಟ್ಟಿಭತ್ಯ ಮತ್ತು ಸಂಬಳಗಳಿಗೂ, ಕೇಂದ್ರದ ತುಟ್ಟಿಭತ್ಯ ಮತ್ತು ಸಂಬಳಗಳಿಗೂ ವ್ಯತ್ಯಾಸವಿರುವುದು ನಮ್ಮಲ್ಲೊಂದೇ ಅಲ್ಲ, ಇತರ ಪ್ರಾಂತ್ಯಗಳಲ್ಲೂ ಇದೆ. ಮದ್ರಾಸಿನಲ್ಲಿರುವ ತುಟ್ಟಿಭತ್ಯ ಮೂಲ ಸಂಬಳ, ಹಾಗೆಯೇ ಬೊಂಬಾಯಿ ಮತ್ತು ಇತರ ಕಡೆಗಳಲ್ಲಿನ ಸಂಬಳ ಮತ್ತು ತುಟ್ಟಿಭತ್ಯವನ್ನು ಕೇಂದ್ರದ ಅಂಕಿಗಳಿಗೆ ಹೋಲಿಕೆ ಮಾಡಿದರೆ ಎಲ್ಲೆಲ್ಲೂ ಕೇಂದ್ರದ ದರಗಳು ಹೆಚ್ಚಿಗೆ ಇರುವುದು ವೇದ್ಯವಾಗುತ್ತದೆ. ಒಂದು ವಿಧದಲ್ಲಿ ಕೇಂದ್ರದ ದರಗಳು ಸ್ವಲ್ಪ ಹೆಚ್ಚಿಗೆ ಇರುವುದಕ್ಕೂ ಒಂದು ಕಾರಣವಿದೆ. ಕೇಂದ್ರ ಸರ್ಕಾರದಲ್ಲಿದ್ದವರು ಇಂದು ಮೈಸೂರಿನಲ್ಲಿರುವವನನ್ನು ನಾಳೆ ಅಸ್ಸಾಂಗೆ ಹೋಗಬೇಕೆಂದು ಹೇಳಿದರೂ ಹೋಗುವುದಕ್ಕೆ ಸಿದ್ಧವಾಗಿರಬೇಕು. ಅವರನ್ನೇನೂ ಹಾಗೆ ವರ್ಗಾಯಿಸಕೂಡದೆಂದೇನೂ ಇಲ್ಲ. ಈ ಪ್ರಕಾರ ಕೇಂದ್ರ ಸರ್ಕಾರದ ಕೆಲಸದಲ್ಲಿ ಎಷ್ಟು ಅನುಕೂಲಗಳಿವೆಯೋ ಅಷ್ಟೇ ಅನಾನುಕೂಲಗಳೂ ಇವೆ. ಆದ್ದರಿಂದ ಯಾವಾಗ ಮಿಕ್ಕ ಎಲ್ಲಾ ಪ್ರಾಂತಗಳ ದರಗಳಿಗೂ ಕೇಂದ್ರದ ದರಗಳಿಗೂ ವ್ಯತ್ಯಾಸವಿದೆಯೋ ಹಾಗೆ ನಮ್ಮಲ್ಲಿಯೂ ವ್ಯತ್ಯಾಸವಿರುವುದು ಅನುಚಿತವೂ ಇಲ್ಲ, ವಿಶೇಷವೂ ಇಲ್ಲ ಎಂಬುದನ್ನು ಬಿನ್ನವಿಸಿಕೊಳ್ಳಬೇಕಾಗಿದೆ.

ಆದರೆ, ಈ ರೀತಿಯಾಗಿ ಕೇಂದ್ರ ಸರ್ಕಾರಕ್ಕೆ ನಮ್ಮ ನೌಕರರನ್ನು ತೆಗೆದುಕೊಂಡುದರಿಂದ ಮತ್ತು ನಮ್ಮ ಹೆಚ್ಚಿನ ಉತ್ಪತ್ತಿಬಾಬುಗಳನ್ನು ಅವರು ತೆಗೆದುಕೊಂಡಿರುವುದರಿಂದ ನಮ್ಮ ನೌಕರರಿಗೆ ಉಂಟಾಗಿರುವ ಕಷ್ಟವನ್ನು ತಪ್ಪಿಸುವುದಕ್ಕಾಗಿ ನಾವು ಅವರನ್ನು ಸಬ್‌ವೆನ್ಷನ್ ಏನಾದರೂ ಕೇಳಕೂಡದೇ ಎಂದು ಮಾನ್ಯ ಸದಸ್ಯರೊಬ್ಬರು ಸೂಚಿಸಿದರು. ಕೇಳುವುದರಲ್ಲೇನೂ ಅಭ್ಯಂತರವಿಲ್ಲ; ಬೇಕಾದರೆ ಕೇಳುತ್ತೇವೆ. ಆದರೆ ಅವರ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ನಮ್ಮ ಈ ಬೇಡಿಕೆಗೆ ಎಷ್ಟುಮಟ್ಟಿನ ಸಹಾನುಭೂತಿಯನ್ನು ತೋರಿಸುವುದಕ್ಕೆ ಅವಕಾಶ ಕಲ್ಪಿಸುತ್ತಾರೋ ನಾನು ಹೇಳಲಾರೆ ಅಂತೂ ಪ್ರಯತ್ನ ಮಾಡಬಹುದು.

ಒಟ್ಟಿನಲ್ಲಿ, ಈ ವಿಚಾರದಲ್ಲಿ ಎಲ್ಲ ಅಂಶಗಳನ್ನೂ ಕೂಡ ಮಾನ್ಯ ಚಂದ್ರಶೇಖರಯ್ಯನವರು ಬಹಳ ವಿಶದವಾಗಿ ಸರ್ಕಾರದವರ ಗಮನಕ್ಕೆ ತಂದಿರುವುದೇ ಅಲ್ಲದೆ ಒತ್ತಾಯಪೂರ್ವಕವಾಗಿಯೂ ಹೇಳಿದ್ದಾರೆ. ಎಷ್ಟು ಸಾಧ್ಯವೋ ಅಷ್ಟೂ ಯೋಚನೆ ಮಾಡುತ್ತಿದ್ದೇವೆ. ಆದರೆ ಕಡ್ಡಾಯವಾಗಿ ಸದ್ಯದಲ್ಲೇ ಮಾಡುವುದಕ್ಕೆ ಸಾಧ್ಯವೆಂಬ ಭರವಸೆಯನ್ನು ಕೊಡಬೇಕೆಂದು ಎಷ್ಟು ಆಸೆಪಟ್ಟರೂ ಇಲ್ಲಿನ ಹಣಕಾಸಿನ ಸ್ಥಿತಿ ಯಾವ ಕಷ್ಟದಲ್ಲಿದೆಯೆಂಬುದನ್ನು ನೋಡಿಕೊಂಡರೆ ಸದ್ಯಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗಿದೆ. ಆದರೆ ಅವರ ವಿಷಯದಲ್ಲಿ ಎಲ್ಲ ಸಹಾನುಭೂತಿಯೂ ಇದೆ. ಬೇಕಾದರೆ ಇನ್ನೂ ಬೇರೆಯಾವುದಾದರೂ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡೋಣ. ಈಗಲೂ ಕೋ-ಆಪರೇಟಿವ್ ಸೊಸೈಟಿಗಳನ್ನೇರ್ಪಡಿಸಿ ಅವರಿಗೆ ಸಾಮಾನುಗಳನ್ನು ಸಲೀಸಾಗಿ ಒದಗಿಸುವುದಕ್ಕೆ ಸಹಾಯ ಮಾಡುತ್ತಿದ್ದೇವೆ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ನೌಕರರಿಗೆ ಲೈಟ್‌ನ ಸೌಕರ್ಯ, ಕೋ-ಆಪರೇಟೀವ್ ಸ್ಟೋರ್ಸ್ ಸೌಕರ್ಯ, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಡ್ವಾನ್ಸ್‌ಗಳನ್ನು ಕೊಡುವುದು—ಈ ರೀತಿಯಾಗಿ ಎಷ್ಟೋ ಸೌಕರ್ಯಗಳನ್ನು ಮಾಡಿಕೊಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಯೋಚನೆ ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪೋಲೀಸು, ವೈದ್ಯ ಇಲಾಖೆ ಮುಂತಾಗಿ ಎಲ್ಲೆಲ್ಲಿ ನಮ್ಮ ನೌಕರುಗಳು ಒಂದೇಕಡೆ ಇರಬೇಕೆಂಬ ಅವಶ್ಯಕತೆಯಿದೆಯೋ ಅಲ್ಲೆಲ್ಲ ಮನೆಗಳನ್ನೂ ಕಟ್ಟಿಸಿಕೊಟ್ಟಿದ್ದೇವೆ. ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸೈಟುಗಳನ್ನೂ ಕೂಡ ಸುಲಭ ಬೆಲೆಗೆ ಬೆಂಗಳೂರಿನಲ್ಲಿ, ಸುಂಕೇನಹಳ್ಳಿ, ಜೈನಗರ ಮುಂತಾದ ಕಡೆಗಳಲ್ಲಿ ಕೊಟ್ಟಿದ್ದೇವೆ. ಅದರಲ್ಲೂ ವಿಲ್ಸನ್‌ಗಾರ್ಡನ್, ಜೈನಗರ, ಕುಮಾರಪಾರ್ಕು ಮುಂತಾದ ಎಕ್ಸ್‌ಟೆನ್ಷನ್‌ಗಳಲ್ಲಿ ಸುಲಭ ಕಂತಿನ ಮೇಲೆಯೂ ಕೂಡ ಸೈಟುಗಳನ್ನು ಕೊಂಡುಕೊಳ್ಳಲು ಅವಕಾಶ ಮಾಡಿಕೊಟ್ಟು, ಹೌಸ್ ಬಿಲ್ಡಿಂಗ್ ಅಲೋಯನ್ಸ್‌ಗಳನ್ನು ಕೊಡುತ್ತಿದ್ದೇವೆ.

ಶ್ರೀಮಾನ್ ಗುಂಡಪ್ಪಗೌಡರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ನಮ್ಮ ಮೈಸೂರು ದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ನೌಕರರಿಗೆ ಅನೇಕ ಸಹಾಯಗಳು ದೊರೆಯುತ್ತಿವೆ. ಆದುದರಿಂದ ಯಾರೂ ಕೂಡ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಈ ನಾನ್ ಗೆಜೆಟೆಡ್ ನೌಕರರ ವಿಷಯದಲ್ಲಿ ಸಹಾನುಭೂತಿ ಕಮ್ಮಿ ಇದೆಯೆಂದು ಇಟ್ಟುಕೊಳ್ಳಕೂಡದು. ಸಾಧ್ಯವಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಈಗ ಅವರು ಕೇಳುತ್ತಿರುವ ವಿಚಾರ ಸೈಟುಗಳು ಮತ್ತು ಮನೆಗಳನ್ನು ಕಟ್ಟಿಸಿಕೊಡದೇಕೆಂಬ ವಿಚಾರವಲ್ಲ; ಹೊಟ್ಟೆವಿಚಾರ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರ ತೊಂದರೆಗಳನ್ನು ನಿವಾರಣೆ ಮಾಡಲು ಸಾಧ್ಯವಾದಷ್ಟನ್ನೂ ಪ್ರಯತ್ನ ಮಾಡೋಣ. ಉಪಯುಕ್ತವಾದ ಅನೇಕ ಬಾಬುಗಳಿಗೆ ಈಗಾಗಲೇ ವಿಶೇಷ ಹಣವನ್ನು

ಒದಗಿಸಿದ್ದೇವೆ. ಇನ್ನೂ ಹಣದ ಕೊರತೆ ಹೆಚ್ಚಾಗಿರುತ್ತೆ. ಆ ಬಗ್ಗೆ ಅನೇಕ ತೆರಿಗೆಗಳನ್ನು ಹೊಸದಾಗಿ ವಿಧಿಸಬೇಕಾಗುತ್ತದೆ. ಆದರೆ ಅಂಥಾದ್ದಕ್ಕೆಲ್ಲ ಮಾನ್ಯ ಸದಸ್ಯರುಗಳ ಬೆಂಬಲವಿದ್ದೇ ಇದೆಯೆಂದು ನಾನು ನಂಬಿದ್ದೇನೆ. ಈ ಒಂದು ಭರವಸೆ ಮೇಲೆ ಮಾನ್ಯ ಸೂಚಕರು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ವಿ. ಎನ್. ನಾರಾಯಣರಾಯರು.—ಭಿನ್ನಾಭಿಪ್ರಾಯವಿದ್ದಾಗ್ಯೂ ನಾನು ಹೆಚ್ಚು ಹೇಳಲು ಅವಕಾಶವಿಲ್ಲ. ಆದ್ದರಿಂದ ನಾನೇನೂ ಹೇಳಬೇಕಾದ್ದಿಲ್ಲ. ಸಭೆಯವರ ಅನುಮತಿಮೇಲೆ ನಾನು ನನ್ನ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

The Amendment was, by leave of the House withdrawn.

ಅಧ್ಯಕ್ಷರು.—ನಿರ್ಣಯದ ಮಾನ್ಯ ಸೂಚಕರು ಏನು ತಿಳಿಸುತ್ತಾರೆ? ಸಭೆಯವರು ಈ ನಿರ್ಣಯದ ಸೂಚಕರಿಗೆ ಅನುಮತಿ ಕೊಟ್ಟರೆ ಅವರು ವಾಪಸ್ಸು ತೆಗೆದುಕೊಳ್ಳಲು ಒಪ್ಪಬಹುದು.

Sri D. H. CHANDRASEKHARIYA.—I do not want to embarrass the Government on this question and therefore I seek the permission of the House to withdraw the resolution.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ). ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ನಿರ್ಣಯವನ್ನು ವಾಪಸು ತೆಗೆದುಕೊಳ್ಳತಕ್ಕದ್ದನ್ನು ವಿರೋಧಪಕ್ಷದ ನಾವು ವಿರೋಧಿಸಬೇಕಾಗಿದೆ.

Mr. SPEAKER.—If even one Hon'ble Member opposes the grant of permission to withdraw the Chair will have to put the resolution to the vote of the House.

The Hon'ble Sri H. C. DASAPPA.—May I know Sir, when the majority has accorded permission for the Hon'ble mover to withdraw whether it is still open for a minority to say that the resolution should be put to vote?

Janab SYED ABDUR RAHMAN.—Yes, it is perfectly constitutional.

Mr. SPEAKER.—I will now put the resolution to the vote of the House. The question is.

"That this Assembly is of the opinion that the existing rates of dearness allowance be raised by 50 per cent in the case of all non-gazetted staff to relieve them of the misery and hardship to which they have been put on account of the abnormal rise in the cost of living."

The motion was negatived.

Mr. SPEAKER.—The House will now rise for lunch.

The Assembly adjourned for lunch at Fifty Five Minutes past Three of the Clock and reassembled at Thirty Minutes past Four of the Clock, Mr. Speaker (The Hon'ble Sri V. Venkatappa) in the Chair.

RESOLUTION No. 2

Setting up a Translation Branch to translate into Kannada all works of Educational value.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ :—

"ಒಂದು ಭಾಷಾಂತರ ಶಾಖೆಯನ್ನು ಕೂಡಲೇ ಸ್ಥಾಪಿಸಬೇಕೆಂದೂ ಮತ್ತು ಶಿಕ್ಷಣ ಮತ್ತು ತಿಳಿವಳಿಕೆಯನ್ನು ಕೊಡುವುದಕ್ಕಾಗಿ ಅವಶ್ಯಕವಾದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ನಾನಾ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಕೆಲಸವನ್ನು ಆ ಶಾಖೆಗೆ ವಹಿಸಿಕೊಡಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಈ ನಿರ್ಣಯದ ವಿಷಯದಲ್ಲಿ ನಾನು ಹೇಳುವುದಾದರೆ ಈಗಾಗಲೇ ಅನೇಕ ಮಂದಿ ಸದಸ್ಯರ ಮುಂದೆ ಈ ವಿಷಯವನ್ನು ತಂದಾಗ ಅವರೆಲ್ಲರೂ ಕೂಡ ಈ ವಿಷಯದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆಂದು ತಿಳಿದು ತುಂಬಾ ಸಂತೋಷವುಂಟಾಗುತ್ತಿದೆ. ಮತ್ತು ಇಂಥ ನಿರ್ಣಯ ಬರುವುದಕ್ಕೆ ಮೊದಲೇ ಬಹಳ ಕಾಲದ ಹಿಂದೆಯೇ ಇಂಥ ಒಂದು ಭಾಷಾಂತರ ಶಾಖೆಯನ್ನು ಸ್ಥಾಪಿಸಬೇಕಾಗಿದ್ದುದು ತುಂಬಾ ಅವಶ್ಯಕವಾಗಿತ್ತು. ತಡವಾಗಿದ್ದರೂ ಚಿಂತೆಯಿಲ್ಲ. ಈಗಲಾದರೂ ಕೂಡ ಸರ್ಕಾರದವರು ಈ ವಿಷಯದಲ್ಲಿ ಶಾಸನಸಭಾ ಸದಸ್ಯರ ಮನೋಭಾವವನ್ನು ತಿಳಿದು ಆದಷ್ಟು ಬೇಗ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ದೇಶ ಸ್ವಾತಂತ್ರ್ಯವಾಗುವುದಕ್ಕೆ ಮೊದಲು ಸುಮಾರು 30 ಲಕ್ಷ ರೂಪಾಯಿಗಳನ್ನು ನೈಜಾಂ ಸರ್ಕಾರದವರು ಈ ಭಾಷಾಂತರ ಶಾಖೆಗೆ ಖರ್ಚು ಮಾಡುತ್ತಿದ್ದರು. ಅವರು ಆದಷ್ಟೂ ಉರ್ದುವಿನಲ್ಲೇ ಎಲ್ಲಾ ರೀತಿಯ ಶಿಕ್ಷಣಕ್ರಮವನ್ನೂ ಜಾರಿಗೆ ತಂದಿರುವುದಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಕೂಡ ಉರ್ದುವಿನಲ್ಲೇ ಶಿಕ್ಷಣ ಕೊಡುವುದಕ್ಕೆ ಸಾಧ್ಯವಿದೆಯೆಂಬುದನ್ನು ಸಿದ್ಧಪಡಿಸಿದ್ದಾರೆ. ಕಾರಣ ಇಷ್ಟೆ, ಈ ಪರಕೀಯ ಭಾಷೆಯಿಂದ ಆದಷ್ಟು ಬೇಗ ಶಬ್ದ ಸಂಪತ್ತನ್ನಾಗಲಿ ಅಥವಾ ತಿಳಿವಳಿಕೆಯನ್ನಾಗಲಿ ಹೆಚ್ಚಾಗಿ ಜಾಗ್ರತೆ ಪಡೆಯಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ.

ಅಲ್ಲದೆ ಮುಂದೆ ಪೂರ್ವಭಾವಿಯಾಗಿ ಕನ್ನಡದ ಪಠ್ಯ ಪುಸ್ತಕಗಳನ್ನು ಮತ್ತು ಕನ್ನಡದಲ್ಲಿ ಉತ್ತಮೋತ್ತಮ ಗ್ರಂಥಕರ್ತರ ಪುಸ್ತಕಗಳನ್ನು ಅನುವಾದ ಮಾಡಿಸಬೇಕಾಗುತ್ತದೆ. ಮುಂದೆ ವಿಶ್ವವಿದ್ಯಾನಿಲಯದಲ್ಲೂ ಮತ್ತು ಹೈಸ್ಕೂಲು ಶಿಕ್ಷಣದಲ್ಲೂ ಪ್ರಾದೇಶಿಕ ಭಾಷೆಯಿಂದಲೇ ಶಿಕ್ಷಣ ಕೊಡಬೇಕಾಗುತ್ತದೆ, ಅದಕ್ಕೆ ಇಂತಹ ಶಾಖೆ

ಒದಗಿಸಿದ್ದೇವೆ. ಇನ್ನೂ ಹಣದ ಕೊರತೆ ಹೆಚ್ಚಾಗಿರುತ್ತೆ. ಆ ಬಗ್ಗೆ ಅನೇಕ ತೆರಿಗೆಗಳನ್ನು ಹೊಸದಾಗಿ ವಿಧಿಸಬೇಕಾಗುತ್ತದೆ. ಆದರೆ ಅಂಥಾದ್ದಕ್ಕೆಲ್ಲ ಮಾನ್ಯ ಸದಸ್ಯರುಗಳ ಬೆಂಬಲವಿದ್ದೇ ಇದೆಯೆಂದು ನಾನು ನಂಬಿದ್ದೇನೆ. ಈ ಒಂದು ಭರವಸೆ ಮೇಲೆ ಮಾನ್ಯ ಸೂಚಕರು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ವಿ. ಎನ್. ನಾರಾಯಣರಾಯರು.—ಭಿನ್ನಾಭಿಪ್ರಾಯವಿದ್ದಾಗ್ಯೂ ನಾನು ಹೆಚ್ಚು ಹೇಳಲು ಅವಕಾಶವಿಲ್ಲ. ಆದ್ದರಿಂದ ನಾನೇನೂ ಹೇಳಬೇಕಾದ್ದಿಲ್ಲ. ಸಭೆಯವರ ಅನುಮತಿಮೇರೆ ನಾನು ನನ್ನ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

The Amendment was, by leave of the House withdrawn.

ಅಧ್ಯಕ್ಷರು.—ನಿರ್ಣಯದ ಮಾನ್ಯ ಸೂಚಕರು ಏನು ತಿಳಿಸುತ್ತಾರೆ? ಸಭೆಯವರು ಈ ನಿರ್ಣಯದ ಸೂಚಕರಿಗೆ ಅನುಮತಿ ಕೊಟ್ಟರೆ ಅವರು ವಾಪಸ್ಸು ತೆಗೆದುಕೊಳ್ಳಲು ಒಪ್ಪಬಹುದು.

Sri D. H. CHANDRASEKHARIYA.—I do not want to embarrass the Government on this question and therefore I seek the permission of the House to withdraw the resolution.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ). ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ನಿರ್ಣಯವನ್ನು ವಾಪಸು ತೆಗೆದುಕೊಳ್ಳತಕ್ಕದ್ದನ್ನು ವಿರೋಧಪಕ್ಷದ ನಾವು ವಿರೋಧಿಸಬೇಕಾಗಿದೆ.

Mr. SPEAKER.—If even one Hon'ble Member opposes the grant of permission to withdraw the Chair will have to put the resolution to the vote of the House.

The Hon'ble Sri H. C. DASAPPA.—May I know Sir, when the majority has accorded permission for the Hon'ble mover to withdraw whether it is still open for a minority to say that the resolution should be put to vote?

Janab SYED ABDUR RAHMAN.—Yes, it is perfectly constitutional.

Mr. SPEAKER.—I will now put the resolution to the vote of the House. The question is.

"That this Assembly is of the opinion that the existing rates of dearness allowance be raised by 50 per cent in the case of all non-gazetted staff to relieve them of the misery and hardship to which they have been put on account of the abnormal rise in the cost of living."

The motion was negatived.

Mr. SPEAKER.—The House will now rise for lunch.

The Assembly adjourned for lunch at Fifty Five Minutes past Three of the Clock and reassembled at Thirty Minutes past Four of the Clock, Mr. Speaker (The Hon'ble Sri V. Venkatappa) in the Chair.

RESOLUTION No. 2

Setting up a Translation Branch to translate into Kannada all works of Educational value.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ :—

"ಒಂದು ಭಾಷಾಂತರ ಶಾಖೆಯನ್ನು ಕೂಡಲೇ ಸ್ಥಾಪಿಸಬೇಕೆಂದೂ ಮತ್ತು ಶಿಕ್ಷಣ ಮತ್ತು ತಿಳಿವಳಿಕೆಯನ್ನು ಕೊಡುವುದಕ್ಕಾಗಿ ಅವಶ್ಯಕವಾದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ನಾನಾ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಕೆಲಸವನ್ನು ಆ ಶಾಖೆಗೆ ವಹಿಸಿಕೊಡಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಈ ನಿರ್ಣಯದ ವಿಷಯದಲ್ಲಿ ನಾನು ಹೇಳುವುದಾದರೆ ಈಗಾಗಲೇ ಅನೇಕ ಮಂದಿ ಸದಸ್ಯರ ಮುಂದೆ ಈ ವಿಷಯವನ್ನು ತಂದಾಗ ಅವರೆಲ್ಲರೂ ಕೂಡ ಈ ವಿಷಯದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆಂದು ತಿಳಿದು ತುಂಬಾ ಸಂತೋಷವುಂಟಾಗುತ್ತಿದೆ. ಮತ್ತು ಇಂಥ ನಿರ್ಣಯ ಬರುವುದಕ್ಕೆ ಮೊದಲೇ ಬಹಳ ಕಾಲದ ಹಿಂದೆಯೇ ಇಂಥ ಒಂದು ಭಾಷಾಂತರ ಶಾಖೆಯನ್ನು ಸ್ಥಾಪಿಸಬೇಕಾಗಿದ್ದುದು ತುಂಬಾ ಅವಶ್ಯಕವಾಗಿತ್ತು. ತಡವಾಗಿದ್ದರೂ ಚಿಂತೆಯಿಲ್ಲ. ಈಗಲಾದರೂ ಕೂಡ ಸರ್ಕಾರದವರು ಈ ವಿಷಯದಲ್ಲಿ ಶಾಸನಸಭಾ ಸದಸ್ಯರ ಮನೋಭಾವವನ್ನು ತಿಳಿದು ಆದಷ್ಟು ಬೇಗ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ದೇಶ ಸ್ವಾತಂತ್ರವಾಗುವುದಕ್ಕೆ ಮೊದಲು ಸುಮಾರು 30 ಲಕ್ಷ ರೂಪಾಯಿಗಳನ್ನು ನೈಜಾಂ ಸರ್ಕಾರದವರು ಈ ಭಾಷಾಂತರ ಶಾಖೆಗೆ ಖರ್ಚು ಮಾಡುತ್ತಿದ್ದರು. ಅವರು ಆದಷ್ಟೂ ಉರ್ದುವಿನಲ್ಲೇ ಎಲ್ಲಾ ರೀತಿಯ ಶಿಕ್ಷಣಕ್ರಮವನ್ನೂ ಜಾರಿಗೆ ತಂದಿರುವುದಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಕೂಡ ಉರ್ದುವಿನಲ್ಲೇ ಶಿಕ್ಷಣ ಕೊಡುವುದಕ್ಕೆ ಸಾಧ್ಯವಿದೆಯೆಂಬುದನ್ನು ಸಿದ್ಧಪಡಿಸಿದ್ದಾರೆ. ಕಾರಣ ಇಷ್ಟೆ, ಈ ಪರಕೀಯ ಭಾಷೆಯಿಂದ ಆದಷ್ಟು ಬೇಗ ಶಬ್ದ ಸಂಪತ್ತನ್ನಾಗಲಿ ಅಥವಾ ತಿಳಿವಳಿಕೆಯನ್ನಾಗಲಿ ಹೆಚ್ಚಾಗಿ ಜಾಗ್ರತೆ ಪಡೆಯಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ.

ಅಲ್ಲದೆ ಮುಂದೆ ಪೂರ್ವಭಾವಿಯಾಗಿ ಕನ್ನಡದ ಪಠ್ಯಪುಸ್ತಕಗಳನ್ನು ಮತ್ತು ಕನ್ನಡದಲ್ಲಿ ಉತ್ತಮೋತ್ತಮ ಗ್ರಂಥಕರ್ತರ ಪುಸ್ತಕಗಳನ್ನು ಅನುವಾದ ಮಾಡಿಸಬೇಕಾಗುತ್ತದೆ. ಮುಂದೆ ವಿಶ್ವವಿದ್ಯಾ ನಿಲಯದಲ್ಲೂ ಮತ್ತು ಹೈಸ್ಕೂಲು ಶಿಕ್ಷಣದಲ್ಲೂ ಪ್ರಾದೇಶಿಕ ಭಾಷೆಯಿಂದಲೇ ಶಿಕ್ಷಣ ಕೊಡಬೇಕಾಗುತ್ತದೆ, ಅದಕ್ಕೆ ಇಂತಹ ಶಾಖೆ

(ಶ್ರೀ ಎಂ. ಸಿ. ಶಿವಾನಂದ ಶರ್ಮರವರು).

ಅತ್ಯಾವಶ್ಯಕ ಎನ್ನುವ ವಿಷಯದಲ್ಲಿ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ ಮದರಾಸು ಮತ್ತು ಬೊಂಬಾಯಿ ಸರ್ಕಾರಗಳವರೂ ಸಹ ಈ ವಿಷಯದಲ್ಲಿ ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿಕೊಂಡಿದ್ದಾರೆ. ಮೊನ್ನೆತಾನ ಬೊಂಬಾಯಿ ಸರ್ಕಾರದವರು ಆಯಾಯ ಪ್ರಾಂತೀಯ ಭಾಷೆಯಲ್ಲೇ ಶಿಕ್ಷಣ ಕೊಡುವುದು ಅತ್ಯಾವಶ್ಯಕ. ಆ ರೀತಿ ಮಾಡದೇ ಇದ್ದರೆ ಎಲ್ಲಾ ಮಕ್ಕಳಿಗೂ ಅನುಕೂಲವಾದ ವಾತಾವರಣವನ್ನು ಕಲ್ಪಿಸಿ ಆದಷ್ಟು ಬೇಗ ಸ್ವಲ್ಪ ಕಾಲದಲ್ಲೇ ಜ್ಞಾನ ಸಂಪಾದನೆ ಮಾಡಲಿಕ್ಕೆ ಶಿಕ್ಷಣ ಕೊಡಲು ಸಾಧ್ಯವಿಲ್ಲ, ನಮ್ಮ ದೇಶದಲ್ಲಿ ಹಿಂದಿನಿಂದ ಇಂಗ್ಲೀಷ್‌ನಲ್ಲಿ ಕೊಡುವ ಶಿಕ್ಷಣ ಪದ್ಧತಿ ಏನು ತಂದಿದ್ದೇವೆಯೋ ಅದನ್ನು ತೆಗೆದು ಹಾಕಬೇಕೆಂದು ಒಪ್ಪಿಕೊಂಡಿದ್ದಾರೆ. ಅದರಂತೆ ಕಾರ್ಯಕ್ರಮವನ್ನು ಸಹ ನಡೆಸುತ್ತಾ ಇದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಮ್ಮ ಸರ್ಕಾರದವರು ಪಠ್ಯ ಪುಸ್ತಕಗಳನ್ನು ಮಾತ್ರ ಪ್ರಪಂಚದಲ್ಲಿರತಕ್ಕ ಅನೇಕ ಮಹತ್ತರವಾದ ಗ್ರಂಥಗಳನ್ನು ಭಾಷಾಂತರ ಮಾಡುವುದಕ್ಕೆ ಪ್ರವೀಣರ ಒಂದು ಸಮಿತಿಯನ್ನು ಆಗಲೀ ಅಥವಾ ಶಾಖೆಯನ್ನಾಗಲೀ ರಚಿಸಿ ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳಿ ಈ ನಿರ್ಣಯವನ್ನು ತಂದಿದ್ದೇನೆ. ಇಂದಿನವರೆಗೂ ಭಾಷಾಂತರ ಮಾಡತಕ್ಕ ಒಂದು ಸಮಿತಿ ಅಥವಾ ಒಂದು ಶಾಖೆ ಇಲ್ಲದೇ ಇರುವುದರಿಂದ ಎಲ್ಲಿ ನೋಡಿದರಲ್ಲಿ ಲೈಬ್ರರಿಗಳಲ್ಲಾಗಲೀ, ಪುಸ್ತಕ ಭಂಡಾರಗಳಲ್ಲಾಗಲೀ ಇಂಗ್ಲೀಷ್ ಪುಸ್ತಕಗಳು ಬಹು ಸಂಖ್ಯೆಯಲ್ಲಿರುವುದನ್ನು ನೋಡಬಹುದು. ಅದರಿಂದ ಸಾಮಾನ್ಯ ಜನರಿಗೆ ಅಷ್ಟು ಅನುಕೂಲವಾಗಲಾರದು. ಕಾರಣವೇನೆಂದರೆ ಇಂದಿನ ಕಾಲ ಪ್ರಜಾಪ್ರಭುತ್ವದ ಕಾಲ. ಪ್ರತಿಯೊಬ್ಬ ಮನುಷ್ಯನಿಗೂ ಮತದಾನದ ಹಕ್ಕು ಬಂದಿದೆ. ರಾಜಕೀಯದಲ್ಲಾಗಲೀ ಅಥವಾ ಮತ್ತಾವ್ಯಾವುದಾದರೂ ವಿಷಯ ಜ್ಞಾನವಾಗಲೀ ಇಂಗ್ಲೀಷ್ ಪುಸ್ತಕಗಳನ್ನೋದಿ ಜ್ಞಾನ ಸಂಪಾದನೆ ಮಾಡುವುದು ಕಷ್ಟ. ಆದಷ್ಟು ಬೇಗ ಎಲ್ಲಾ ಶಾಲೆಗಳಲ್ಲೂ, ಪುಸ್ತಕಭಂಡಾರಗಳಲ್ಲೂ ಕನ್ನಡದ ಪುಸ್ತಕಗಳು ದೊರೆಯಲು ಅವಕಾಶ ಕಲ್ಪಿಸುವುದಕ್ಕಾಗಿ ಇಂಥಾ ಒಂದು ಭಾಷಾಂತರ ಶಾಖೆಯನ್ನು ರಚನೆ ಮಾಡಬೇಕೆಂದು ಹೇಳಿ ಒತ್ತಾಯಪೂರ್ವಕವಾಗಿ ನಾನು ಈ ನಿರ್ಣಯವನ್ನು ತಂದಿದ್ದೇನೆ.

ಅಧ್ಯಕ್ಷರು.—Resolution moved.—

"ಒಂದು ಭಾಷಾಂತರ ಶಾಖೆಯನ್ನು ಕೂಡಲೇ ಸ್ಥಾಪಿಸಬೇಕೆಂದೂ ಮತ್ತು ಶಿಕ್ಷಣ ಮತ್ತು ತಿಳಿವಳಿಕೆಯನ್ನು ಕೊಡುವುದಕ್ಕಾಗಿ ಅವಶ್ಯಕವಾದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ನಾನಾ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಕೆಲಸವನ್ನು ಆ ಶಾಖೆಗೆ ವಹಿಸಿಕೊಡಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ"

ಮಾನ್ಯ ಸದಸ್ಯರು ಶ್ರೀ ವಿ. ಎಸ್. ನಾರಾಯಣರಾಯರಿಂದ ಕಳುಹಿಸಲ್ಪಟ್ಟ ಒಂದು ತಿದ್ದುಪಡಿ ಇದೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ ಜನರಲ್).—ನನ್ನ ತಿದ್ದುಪಡಿ ಈ ರೀತಿ ಇದೆ:—

'ಮೂರನೆಯ ಪಂಕ್ತಿಯಲ್ಲಿ "ಭಾಷಾಂತರ ಮಾಡುವ ಕೆಲಸವನ್ನು" ಎಂಬ ಪದಗಳ ತರುವಾಯ "ಮತ್ತು ಒಂದು ವಿಶ್ವ ಕೋಶವನ್ನು ("ಎನ್‌ಸೈಕ್ಲೋಪೀಡಿಯಾ") ರಚಿಸುವ ಕೆಲಸವನ್ನು" ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ವಿಶ್ವಕೋಶ ರಚಿಸುವುದಕ್ಕೂ ಕೂಡ ಈ ಸಮಿತಿ ಕೆಲಸ ಕೈಕೊಳ್ಳಬೇಕೆಂದು ಇದರ ತತ್ವವಾಗಿದೆ. ಆಗಲೇ ಈ ನಿರ್ಣಯವನ್ನು ಸಭೆಯ ಮುಂದಿಟ್ಟು ಸಮಿತಿ ಏಕೆ ರಚಿಸಬೇಕು, ಅದರ ಅವಶ್ಯಕತೆ ಏನಿದೆ ಎಂಬ ವಿಚಾರಗಳನ್ನು ಶ್ರೀಮಾನ್ ಶಿವಾನಂದ ಶರ್ಮರವರು ನಾಲ್ಕು ಮಾತುಗಳಲ್ಲಿ ಹೇಳಿದ್ದಾರೆ. ಆದ್ದರಿಂದ ತೀವ್ರವಾದ ಭಾಷಣ ಅನಾವಶ್ಯಕ. ಸಾಮಾನ್ಯವಾಗಿ ಈ ತತ್ವ ಅಂಗೀಕರಿಸಬಹುದಾಗಿದೆ. ವಿಶ್ವಕೋಶ ಏಕೆಂದರೆ ಭಾಷಾಂತರ ಮಾಡುವಾಗ ಒಬ್ಬೊಬ್ಬರು ಒಂದೊಂದು ಪದ ಉಪಯೋಗಿಸುತ್ತಾರೆ, ಎಲ್ಲರೂ ಒಂದೇ ವಿಧವಾದ ಪದವನ್ನು ಬಳಕೆ ಮಾಡಬೇಕು. ಸಾಮಾನ್ಯವಾಗಿ ಒಂದು ಇಂಗ್ಲೀಷ್ ಪದ ಇದ್ದರೆ ಅದನ್ನು ಭಾಷಾಂತರ ಮಾಡತಕ್ಕ ಪದ ಎಲ್ಲರಿಗೂ ಅರ್ಥವಾಗುವಹಾಗಿರಬೇಕು. ಮತ್ತು ಎಲ್ಲರೂ ಒಂದೇ ಪದ ಪ್ರಯೋಗ ಮಾಡಬೇಕಾದ್ದು ಬಹಳ ಅಗತ್ಯ. ಯಾವುದಾದರೂ ಒಂದು ಇಂಗ್ಲೀಷ್ ಪದ ತರ್ಜುಮೆ ಮಾಡಿದರೆ ಒಬ್ಬೊಬ್ಬರು ಒಂದೊಂದು ಪದ ಬಳಕೆ ಮಾಡುತ್ತಾರೆ, ಇದು ತಪ್ಪಬೇಕಾದರೆ ಕನ್ನಡದಲ್ಲಿ ವಿಶ್ವಕೋಶ ಸಿದ್ಧಪಡಿಸಬೇಕು. ಮದರಾಸಿನಲ್ಲಿ ಮದರಾಸು ಸರ್ಕಾರದವರು ವಿಶ್ವಕೋಶ ಸಿದ್ಧಪಡಿಸುವುದಕ್ಕೆ $12\frac{1}{2}$ ಲಕ್ಷ ರೂಪಾಯಿ ತೆಗೆದಿಟ್ಟಿದ್ದಾರೆ. $6\frac{1}{4}$ ಲಕ್ಷ ರೂಪಾಯಿ ತಮಿಳು ಭಾಷೆಗೆ, $6\frac{1}{4}$ ಲಕ್ಷ ರೂಪಾಯಿ ತೆಲುಗು ಭಾಷೆಗೆ, ವಿಶ್ವಕೋಶ ರಚಿಸಲು ಮೀಸಲಾಗಿಟ್ಟಿದ್ದಾರೆ. ಹೀಗೆಯೇ ಸಾರ್ವಜನಿಕರಿಂದಲೂ ಕೂಡ ಹಣ ಶೇಖರಿಸಲ್ಪಟ್ಟು ಈ ಕೆಲಸ ಮುಂದುವರಿಯುತ್ತಾ ಇದೆ. ಹೀಗೆ ನೆರೆ ಪ್ರಾಂತ್ಯದಲ್ಲಿ ತಮಿಳು ಮತ್ತು ತೆಲಗು ಭಾಷೆಯ ವಿಶ್ವಕೋಶದ ಕೆಲಸ ಮುಂದುವರಿಯುತ್ತಾ ಇರುವಾಗ ಕನ್ನಡದಲ್ಲಿ ಇದುವರೆಗೂ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವುದು ಬಹಳ ಶೋಚನೀಯವಾದ ವಿಚಾರ. ಇದಕ್ಕೆ ಬಹಳ ಹಣ ಬೇಕು ಮತ್ತು ಸರ್ಕಾರದ ಸಹಾಯ ಬೇಕು. ಸಾರ್ವಜನಿಕರೇ ಕೈಕೊಂಡು ಮುಂದುವರಿಸುವುದು ಬಹಳ ಕಷ್ಟವಾಗುತ್ತದೆ. ಕನ್ನಡ ಪರಿಷತ್ತು ಇದೆ. ಅವರು ಈ ಕೆಲಸ ಕೈಕೊಂಡು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬರಬಹುದು. ಶ್ರೀಮಾನ್ ಶಿವಾನಂದ ಶರ್ಮರವರು ಸೂಚಿಸುವಂತೆ ಒಂದು ಸಮಿತಿಯನ್ನು ರಚಿಸಿ ಅವರು ಆ ಕೆಲಸದ ಜೊತೆಗೆ ವಿಶ್ವಕೋಶವನ್ನೂ ಸಹ ಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ಹೇಳಿ ಈ ತಿದ್ದುಪಡಿಯನ್ನು ಸೂಚಿಸುತ್ತೇನೆ.

ಅಧ್ಯಕ್ಷರು.—Amendment moved:—

"ಮೂರನೆಯ ಪಂಕ್ತಿಯಲ್ಲಿ "ಭಾಷಾಂತರ ಮಾಡುವ ಕೆಲಸವನ್ನು" ಎಂಬ ಪದಗಳ ತರುವಾಯ "ಮತ್ತು ಒಂದು ವಿಶ್ವಕೋಶವನ್ನು (ಎನ್‌ಸೈಕ್ಲೋಪೀಡಿಯಾ) ರಚಿಸುವ ಕೆಲಸವನ್ನು" ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಸ್ವಾಮಿ, ಶ್ರೀಮಾನ್ ನಾರಾಯಣರಾಯರು ತಂದಿರುವ ತಿದ್ದುಪಡಿಯನ್ನು ನಾನು ವಿರೋಧಿಸಬೇಕಾಗಿದೆ. ಏಕೆಂದರೆ ಕನ್ನಡ ಸಾಹಿತ್ಯ ಪರಿಷತ್ತು ಇದೆ, ಅಲ್ಲಿ ಈ ಕೆಲಸ ನಡೆಸಬಹುದೆಂದು ಹೇಳಿದರು. ಅಲ್ಲಿ ಏನು ನಡೆಯುತ್ತಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಈಗಾಗಲೇ ವಿಶ್ವಕೋಶ ರಚನೆ ಮಾಡುವ ಕೆಲಸವನ್ನು ಅವರು ಕೈಕೊಂಡಿದ್ದಾರೆ ಅದಕ್ಕೆ ಮೈಸೂರು ಸರ್ಕಾರದವರು ವಿಶ್ವವಿದ್ಯಾನಿಲಯದಿಂದ ಹಣ ಸಹಾಯ ಮಾಡುತ್ತಾ ಇದ್ದಾರೆ.

ಅಧ್ಯಕ್ಷರು.—ಸಾಹಿತ್ಯಪರಿಷತ್ತಿನಲ್ಲೇ!

ಶ್ರೀ ಕೆ. ಪುಟ್ಟಸ್ವಾಮಿಯವರು.—ಹೌದು.

Sri A. BHEEMAPPA NAIK.—That is with regard to Dictionary.

Sri K. PUTTASWAMY.—Dictionary is already published. ವಿಶ್ವಕೋಶಕ್ಕೆ ವಿಶ್ವವಿದ್ಯಾನಿಲಯದಿಂದ ಹಣ ಕೊಡಲು ಒಪ್ಪಿಕೊಂಡು ಮಂಜೂರಾಗಿದೆ.

ಅಧ್ಯಕ್ಷರು.—ಅವರು ಆ ಕೆಲಸ ಕೈಕೊಂಡಿಲ್ಲ.

Sri K. PUTTASWAMY.—As far as I know they have taken it up. ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಪುಸ್ತಕಗಳನ್ನು ಭಾಷಾಂತರ ಮಾಡಿ ಪುಸ್ತಕಗಳನ್ನೊದಗಿಸಬೇಕಾದ್ದು ಅತ್ಯಾವಶ್ಯಕ. ಈಗ ಮಕ್ಕಳಿಗೆ ಎಲ್ಲಾ ತರಗತಿಗಳಲ್ಲೂ ಮಾತೃಭಾಷೆಯಲ್ಲೇ ಬೋಧಿಸಬೇಕೆಂದಿರುವಾಗ, ಪುಸ್ತಕಗಳ ಅವಶ್ಯಕತೆ ಬಹಳವಾಗಿದೆ. ಅದರಲ್ಲೂ ವಿಜ್ಞಾನ ಶಾಸ್ತ್ರವನ್ನು ಬೋಧಿಸುವಾಗ ವಿದ್ಯಾಭ್ಯಾಸದ ಇಲಾಖೆಯುವರು ಯಾವ ಪಾರಿಭಾಷಿಕ ಶಬ್ದಗಳನ್ನು ಒಪ್ಪುತ್ತಾರೋ ಆ ಪಾರಿಭಾಷಿಕ ಶಬ್ದಗಳನ್ನೇ ಉಪಯೋಗಿಸಿ ಬರೆಯುವ ಪಠ್ಯಪುಸ್ತಕಗಳಿಂದ ಮಕ್ಕಳಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಹಾಗಲ್ಲದೆ, ಅನಧಿಕೃತವಾಗಿ ಭಾಷಾಂತರ ಮಾಡುವುದಕ್ಕೆ ತೊಡಗಿ, ಒಬ್ಬೊಬ್ಬರು ಒಂದೊಂದು ತರಹ ತರ್ಜುಮೆ ಮಾಡಿ ಪಾರಿಭಾಷಿಕ ಶಬ್ದಗಳನ್ನುಪಯೋಗಿಸಿದರೆ ಭಾಷಾಂತರವು ಮತ್ತಷ್ಟು ಕಠಿಣವಾಗುತ್ತದೆ. ಆದ್ದರಿಂದ ಈಗ ಅತ್ಯಗತವಾಗಿ ಭಾಷಾಂತರ ಶಾಖೆಯನ್ನು ಏರ್ಪಡಿಸಬೇಕು. ಅದರಲ್ಲೂ ಪರಿಣತರನ್ನು ನೇಮಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅತ್ಯಗತ್ಯವಾಗಿ ಯಾವ ಯಾವ ಪುಸ್ತಕಗಳು ಬೇಕೋ ಆ ಪುಸ್ತಕಗಳನ್ನೆಲ್ಲಾ ಕಡ್ಡಾಯವಾಗಿ ತರ್ಜುಮೆ ಮಾಡಿಸಬೇಕು. ಅನಂತರ ಇತರ ಪುಸ್ತಕಗಳನ್ನು ತರ್ಜುಮೆ ಮಾಡಬಹುದು. ಆದಷ್ಟು ಜಾಗ್ರತೆ ನಿರ್ಣಯದ ಆಶೆಯ ಈಡೇರಿಸಿದರೆ ಕನ್ನಡ ಮಾಧ್ಯಮ ಎಲ್ಲಾ ಶಾಲೆಗಳಲ್ಲೂ, ಎಲ್ಲಾ ಕಾಲೇಜುಗಳಲ್ಲೂ ಜಾರಿಗೆ ಬರಲು ಅನುಕೂಲವಾಗುತ್ತದೆಎಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೆ, ಶ್ರೀಮಾನ್ ಶಿವಾನಂದಶರ್ಮರು ತಂದಿರತಕ್ಕ ಈ ನಿರ್ಣಯದ ವಿಚಾರದಲ್ಲಿ ಸರ್ಕಾರಕ್ಕೂ ಅವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಪ್ರೈಮರಿ ಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲು ತರಗತಿಗಳಲ್ಲಿ ಈಗಾಗಲೇ ಕನ್ನಡ ಮೀಡಿಯಂ ಇದೆ. ಕನ್ನಡಕ್ಕೆ ತರ್ಜುಮೆ ಮಾಡಿರತಕ್ಕ ಪುಸ್ತಕಗಳೂ ಇವೆ. ಮುಖ್ಯವಾಗಿ ವಿಶ್ವವಿದ್ಯಾನಿಲಯದಲ್ಲಿ ಈ ರೀತಿ ಏರ್ಪಾಡಿಲ್ಲವೆಂಬುದು ಈಗಿರತಕ್ಕ ಸಮಸ್ಯೆ. ಪ್ರೈಮರಿ ಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲುಗಳಲ್ಲಿ ಇದಕ್ಕಿಂತ ತಕ್ಕ ಏರ್ಪಾಡನ್ನು ಇಲಾಖೆಯವರು ಮಾಡಿದ್ದಾರೆ. ಈಗಿರುವ ಸೌಕರ್ಯ ಕಡಿಮೆಯಾಗಿದ್ದರೆ ಸಾಕಾದಷ್ಟು ಸೌಕರ್ಯ ಕಲ್ಪಿಸಲು ಸರ್ಕಾರದವರು ತಕ್ಕ ಏರ್ಪಾಡು ಮಾಡುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ಇನ್ನೂ ಈ ವಿಚಾರದಲ್ಲಿ ಸಾಕಾದಷ್ಟು ಕಾರ್ಯಕ್ರಮ ಕೈಗೊಂಡಿಲ್ಲವೆಂಬುದು ನಿಜ, ಆದರೆ ವಿಶ್ವವಿದ್ಯಾನಿಲಯದಲ್ಲಿ ಈ ತರ್ಜುಮೆ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು, ಅಲ್ಲಿ ಇನ್ನೂ ಕನ್ನಡ ಮೀಡಿಯಂ ಜಾರಿಗೆ ಬಂದಿಲ್ಲ, ಇದು ಜಾರಿಗೆ ಬಂದ ಮೇಲೆ, ಇದನ್ನು ಒಂದು ಮುಖ್ಯ ಕಾರ್ಯವಾಗಿಟ್ಟುಕೊಂಡು, ಇದಕ್ಕೇ ಪ್ರತ್ಯೇಕವಾಗಿ ಒಂದು ಶಾಖೆಯನ್ನಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಕನ್ನಡ ಮಾಧ್ಯಮ ಬರುವುದಕ್ಕೆ ಪೂರ್ವಭಾವಿಯಾಗಿಯೇ ಈ ಕಾರ್ಯವನ್ನು ಮಾಡಬೇಡವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕನ್ನಡ ಮಾಧ್ಯಮವನ್ನು ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತರುವುದೂ ಒಂದು ಪ್ರಶ್ನೆ. ಇದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಹಾಗೆಯೇ ಇನ್ನು ಹತ್ತು ಹದಿನೈದು ವರ್ಷಗಳಲ್ಲಿ ರಾಷ್ಟ್ರಭಾಷೆಯಲ್ಲೂ ಬೋಧನೆ ಮಾಡಬೇಕೆಂಬುದೂ ಇದೆ. ಹೀಗಿರುವಾಗ ಏಕ್‌ದಮ್ ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ಕನ್ನಡದಲ್ಲೇ ಮಾಡಬೇಕೆಂದರೆ ಕಷ್ಟವಾಗುತ್ತದೆ. ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ನಾನಾ ಶಾಖೆಗಳಿವೆ. ರಸಾಯನಶಾಸ್ತ್ರ, ಭೌತಿಕಶಾಸ್ತ್ರ, ಗಣಿತಶಾಸ್ತ್ರ, ಮುಂತಾದ ನಾನಾ ಶಾಖೆಗಳಿಗೆ ಅವಶ್ಯಕವಾದ ಪುಸ್ತಕಗನನ್ನು ತರ್ಜುಮೆ ಮಾಡಲು ಬೇರೆ ಬೇರೆ ಏರ್ಪಾಡು ಮಾಡಬೇಕಾಗುತ್ತದೆ. ಈ ಮಧ್ಯೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವನ್ನು ಯಾವಾಗ ಜಾರಿಗೆ ತರಬಹುದೆಂಬ ಅಂಶವೂ ಪರಿಶೀಲನೆಯಲ್ಲಿದೆ. ಇದು ತೀರ್ಮಾನವಾದಮೇಲೆ, ಇದಕ್ಕೆ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡುತ್ತಾರೆಂಬುದರಲ್ಲಿ ಅನುಮಾನವೇ ಇಲ್ಲವೆಂಬುದನ್ನು ಶ್ರೀಮಾನ್ ಶರ್ಮರವರಿಗೆ ತಿಳಿಸಬೇಕಾಗಿದೆ.

ಅಧ್ಯಕ್ಷರು.—ಇದು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಸಂಬಂಧಪಟ್ಟದೆಂದು ಹೇಗೆ ಹೇಳುತ್ತೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದು ವಿಶ್ವವಿದ್ಯಾನಿಲಯದಲ್ಲಿಲ್ಲ, ವಿದ್ಯಾ ಇಲಾಖೆಯಲ್ಲಿ ಇದೆ, ವಿದ್ಯಾ ಇಲಾಖೆಯಲ್ಲಿ ಇದಕ್ಕೆ ಬೇಕಾದಷ್ಟು ಸೌಕರ್ಯವನ್ನು ಕಲ್ಪಿಸಿದ್ದಾರೆ. ಆದರೆ ವಿಶ್ವವಿದ್ಯಾನಿಲಯದಲ್ಲಿಯೂ ಹೀಗೆ ಮಾಡಲು ಈಗ ಅವಕಾಶವಿಲ್ಲ. ಕೆಲವು ದಿನಗಳಾದಮೇಲೆ ಈ ಕೊರತೆ ಪರಿಹಾರವಾಗುತ್ತದೆಂದು ಹೇಳುತ್ತೇನೆ. ಈ ನಿರ್ಣಯದಲ್ಲಿ ಎಲ್ಲ ತರಗತಿಗಳಲ್ಲಿಯೂ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿಸಬೇಕೆಂದು ಸೂಚಿಸಿದ್ದಾರೆ; ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ವಿದ್ಯಾಭ್ಯಾಸದ ಇಲಾಖೆಗೆ ಬೇಕಾದ ಪುಸ್ತಕಗಳನ್ನು ಖಾಸಗಿ ಜನರು ತಾವು ತಾವೇ ತರ್ಜುಮೆ ಮಾಡುತ್ತಿದ್ದಾರೆಯೇ ಹೊರತು ಸರ್ಕಾರದವರು ಇದಕ್ಕಾಗಿ ಬೇರೆ ಇಲಾಖೆ ಮಾಡಿದ್ದಾರೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರೈಮರಿ ಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲು ತರಗತಿಗಳಿಗೆ ಬೇಕಾದ ಪುಸ್ತಕಗಳನ್ನು ತರ್ಜುಮೆ ಮಾಡಿಸಲು ಸರ್ಕಾರದಿಂದಲೂ ಏರ್ಪಾಡಿದೆ.

ಶ್ರೀ ಡಿ. ಎಂ. ಸಿದ್ಧಯ್ಯನವರು.—ತರ್ಜುಮೆ ಮಾಡುವ ಶಾಖೆ ಬೇರೆ ಇಲ್ಲ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಬರೀ ಪಠ್ಯಪುಸ್ತಕಗಳ ದರ್ಜುಮೆ ಮಾತ್ರವಲ್ಲ, ಜ್ಞಾನಾರ್ಜನೆಗೆ ಉಪಯುಕ್ತವಾದ ವಿಷಯಗಳ ಪುಸ್ತಕಗಳನ್ನೂ ತರ್ಜುಮೆ ಮಾಡಲು ಏರ್ಪಾಡಿರಬೇಕು.

ಅಧ್ಯಕ್ಷರು.—ತಿದ್ದುಪಡಿಯ ವಿಚಾರ ಉತ್ತರದಲ್ಲಿ ಹೇಳಲಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಸ್ವಾಮಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಆದರೂ ಭರವಸೆಯನ್ನು ಇನ್ನೂ ಸ್ಪಷ್ಟವಾಗಿ, ಆದಷ್ಟು ಬೇಗ ಈ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದ್ದರೆ ಚೆನ್ನಾಗಿತ್ತು. ಎಲ್ಲ ಮಾನ್ಯ ಸದಸ್ಯರ ಮನಸ್ಸೂ, ಜನರ ಮನಸ್ಸೂ ಇದರ ಪರವಾಗಿರುವುದರಿಂದ ಕನ್ನಡದ ಮೂಲಕವೇ ಕನ್ನಡ ಮಕ್ಕಳಿಗೆ ಜ್ಞಾನದಾನವಾಗುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು. ಸರ್ಕಾರದವರಿತ್ತಿರುವ ಭರವಸೆಯ ಮೇಲೆ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave of the House withdrawn.

Mr. SPEAKER.—Next Resolution, Sri S. Rangaramaiah.

RESOLUTION No. 3.

Prohibition of sale of white oil

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ನನ್ನ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"ಸೋಲ್ ಏಜೆಂಟರುಗಳು ವರ್ತಕರುಗಳಿಗೆ 'ವೈಟ' ಆಯಿಲ್' ಎಂಬ ಎಣ್ಣೆಯನ್ನು ಯಾವ ಹೆಸರಿನಿಂದರೇ ಆಗಲಿ ಮಾರಾಟ ಮಾಡುವ ವಿಷಯದಲ್ಲಿ ವಿಶೇಷ ರೀತಿಯ ಲೈಸೆನ್ಸು ಇದ್ದ ಹೊರತು, ಅದನ್ನು ಮಾರಾಟ ಮಾಡದಂತೆ ನಿರೋಧಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ಈ ಠರಾವನ್ನು ತಂದಿರತಕ್ಕ ಉದ್ದೇಶವಾದರೂ ಇಷ್ಟೆ; ವೈಟ್ ಆಯಿಲ್ ಎಂದು ಹೇಳುವ ಪದಾರ್ಥವನ್ನು ಹೊಸದಾಗಿ ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆ, ಆದಕಾರಣ ಇದು ಎಲ್ಲರಿಗೂ ದೊರೆಯದೇಯಿರುವ ಹಾಗೆ ನಿರೋಧ ಮಾಡಬೇಕು. ಇದನ್ನು ಖನಿಜ ಅಥವ ಗಣಿಗಳಿಂದ ತೆಗೆಯುತ್ತಾರೆಯೇ ಹೊರತು ಎಣ್ಣೆ ಬೀಜದಿಂದಲ್ಲ, ನನಗೆ ತಿಳಿದಮಟ್ಟಿಗೆ, ಇದು ಸೀಮೆ ಎಣ್ಣೆಯ ವಂಶದಲ್ಲಿ ಉತ್ಪತ್ತಿಯಾಗುತ್ತದೆ, ಇದು ಅದರ ತಮ್ಮ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಖನಿಜದಿಂದ ತೆಗೆಯಬೇಕಾದರೆ, ಮೊದಲು ಸೀಮೆಎಣ್ಣೆ ಬರುತ್ತದೆ, ಆಮೇಲೆ ಬೇರೆ ಕ್ರಮವನ್ನು ಪ್ರಯೋಗಿಸಿ ಈ ವೈಟ್ಆಯಿಲ್ ತೆಗೆಯುತ್ತಾರೆ. ಇದರ ಸ್ವಭಾವ ಮತ್ತು ರೂಪ ನೀರಿನ ಹಾಗಿದೆ. ಇದಕ್ಕೆ ವಾಸನೆ ಇಲ್ಲ, ರುಚಿ ಇಲ್ಲ, ಬಣ್ಣವಿಲ್ಲ. ಇದನ್ನು ಬರ್ಮಾ ಷೆಲ್ ಕಂಪೆನಿಯವರು ಆಮದು ಮಾಡುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಇದು white kerosine oil ಎಂದು ತಿಳಿದುಕೊಳ್ಳೋಣವೆ?

ಶ್ರೀ ಎಸ್. ರಂಗರಾಮಯ್ಯನವರು.—ಇದೂ ಒಂದು mineral oil. ಇದು ಯಾವ ಬಣ್ಣವನ್ನಾದರೂ, ಮತ್ತು ಯಾವ ವಾಸನೆಯನ್ನಾದರೂ ತೆಗೆದುಕೊಳ್ಳುತ್ತದೆ. ಇದನ್ನು ಯಾವ ಪದಾರ್ಥಕ್ಕೆ ಸೇರಿಸಿದರೂ ಸುಲಭವಾಗಿ ಪತ್ತೆಮಾಡುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಹೊಸ ನಾಗರೀಕತೆ ಹೆಚ್ಚುತ್ತಾ ಬಂದು ಈಚೆಗೆ ಈ ಎಣ್ಣೆಯನ್ನು ಅಲ್ಪಸ್ವಲ್ಪ ಪ್ರಮಾಣದಲ್ಲಿ ಹೇರ್ಆಯಿಲ್‌ಗಳನ್ನು ತಯಾರಿಸಲು ಅಂದರೆ ಕೇಶರಂಜನಿ ಎಣ್ಣೆ (ಮುಂತಾದುವುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದಾರೆಂದು ಕೇಳಿದ್ದೇನೆ. ಈಚೆಗೆ ಬೇರೆ ಕೆಲಸಗಳಿಗೂ ಉಪಯೋಗಿಸಲು ಪ್ರಾರಂಭವಾಗಿದೆ. ಈಗ ಬಹಳ ಭೀತಿಗೆ ಕಾರಣವಾಗಿರುವ ವಿಷಯವೇನೆಂದರೆ, ಈ ಎಣ್ಣೆಯನ್ನು ಒಳ್ಳೆಣ್ಣೆಗೂ ಬೆರಸಿ ಇದರಿಂದ ಹೋಟಲುಗಳಲ್ಲಿ ಅನೇಕ ತಿಂಡಿ ಪದಾರ್ಥಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಇದನ್ನು ವನಸ್ಪತಿ ಕಂಪೆನಿಯವರು ತರಿಸಿಕೊಂಡು dehydrogenate ಮಾಡಿ ಬೆರಸುತ್ತಿದ್ದಾರೆ. ಈಗ ಬರತಕ್ಕ ವನಸ್ಪತಿಗಳಲ್ಲಿ ಸುಮಾರು ಸೇಕಡ 60–70 ರಷ್ಟು ಈ ವೈಟ್ ಆಯಿಲ್ ಇರುತ್ತದೆಂದು ತಿಳಿದುಬಂದಿದೆ. ಇದು ತಪ್ಪು, ಹಾಗಿಲ್ಲ, ಎಂದು ತಿಳಿದವರು ಹೇಳಿದರೆ ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಅಂತೂ ಇದರಲ್ಲಿ ಸೇರಿರುತ್ತದೆ. ಘನೀಭೂತವಾದ ವನಸ್ಪತಿಯನ್ನು ತೆಗೆದುಕೊಂಡು ಬಂದು ಬೆಣ್ಣೆಯಲ್ಲಿ ಸೇರಿಸಿ ಬೆಣ್ಣೆಯನ್ನು ಮಾರಾಟ ಮಾಡುತ್ತಿದ್ದಾರೆ. ಬೆಣ್ಣೆಗೆ ಕೊಬ್ಬು ಸೇರಿಸಿದರೂ ಚಿಂತೆಯಿಲ್ಲ, ಇದನ್ನು ಸೇರಿಸಿದರೆ ಎಷ್ಟು ಅಪಾಯಕರ ಎಂಬುದನ್ನು ಯೋಚಿಸಬೇಕು, ಇದರಲ್ಲಿ ಎ. ಬಿ. ಸಿ. ಡಿ. ಯಾವ ವಿಟಮಿನ್‌ಗಳೂ ಇಲ್ಲ. ಆರೋಗ್ಯಕ್ಕೆ ಒಳ್ಳೆಯದಲ್ಲ, ಹೀಗಿದ್ದರೂ ಇದನ್ನು ಸೇರಿಸಿ ಮಾರುತ್ತಿದ್ದಾರೆ. ಇದು ಬಹಳ ಭಯಾನಕವಾದುದು, ಇದರಿಂದ ಗಾಬರಿಯಾಗಿದೆ. ಈಗ ನೀರುಮಜ್ಜಿಗೆ, ನೀರುಹಾಲು, ಬೆರಕೆ ಬೆಣ್ಣೆ, ಕಲ್ಲು ಮಣ್ಣು ಬೆರಸಿದ ಅಕ್ಕಿ ರಾಗಿ, ಇವುಗಳನ್ನು ಸೇವಿಸಿ ನಾವು ಜೀವಿಸಬೇಕಾಗಿದೆ. ಹೀಗಿರುವಾಗ ಸ್ವಾತಂತ್ರ್ಯ ಬಂದಮೇಲೆ ಧಿರೋದ್ಧಾತ ಸಿಪಾಯಿಗಳಾಗಿ ನಾವು ದೇಶವನ್ನು ಉದ್ಧಾರ ಮಾಡುವುದು ಹೇಗೆ? ನಮ್ಮ ದೇಶವನ್ನು ಬೆಳೆಸುವುದು ಹೇಗೆ? ಈ ಹೊತ್ತಿನ ಪ್ರಶ್ನೋತ್ತರ ಕಾಲದಲ್ಲಿ ವ್ಯಕ್ತಪಟ್ಟದ್ದನ್ನು ನೋಡಿದರೆ, 1941ನೆಯ ಇಸವಿಯಿಂದೀಚೆಗೆ 1951ರಲ್ಲಿ 18ಲಕ್ಷ ಜನ ಹೆಚ್ಚಿದ್ದಾರೆ. ಈ ಬೆರಕೆ ಪದಾರ್ಥಗಳನ್ನು ತಿನ್ನುತ್ತಿರುವುದೇ ಹೀಗೆ ಜನಸಂಖ್ಯೆ ಹೆಚ್ಚಲು ಕಾರಣವೆಂದು ಕೆಲವರು ಹೇಳುತ್ತಿದ್ದಾರೆ (ನಗು!) ಇದರಲ್ಲಿ ನನಗೇನೋ ಅಷ್ಟು ನಂಬಿಕೆ ಇಲ್ಲ. ನಾನೇನೋ ಗಟ್ಟಿಮುಟ್ಟಾಗಿದ್ದೇನೆ. ಹೀಗಿರುವಾಗ ಜನರ ಆರೋಗ್ಯ ರಕ್ಷಣೆ ಮಾಡುವುದು ಸರ್ಕಾರದ ಅತಿ ಮುಖ್ಯವಾದ ಕೆಲಸ. ಇದರ ಅನುಭವ, ಇದರ ದುಷ್ಪರಿಣಾಮ ನನಗೆ ಯಾವಾಗ ಬಂತೆಂದರೆ, ಇದನ್ನು ಕೊಬ್ಬರಿ ಎಣ್ಣೆಗೆ ಬೆರೆಸುತ್ತಾರೆಂಬುದುದು ಗೊತ್ತಾದಾಗ, ನಮ್ಮ ಮನೆಯ ಹೆಣ್ಣುಮಕ್ಕಳ ತಲೆಕೂದಲು ಉದುರುವುದಕ್ಕೆ ಪ್ರಾರಂಭವಾಯಿತು. ಒಂದು ಸಣ್ಣಮಗುವಿನ ತಲೆ ಕೂದಲು ಉದರಿ ತಾಮ್ರದ ಚೊಂಬು ಇರುವ ಹಾಗಾಯಿತು, ಕಾಲೇಜಿನಲ್ಲಿ ಓದುವ ಹೆಣ್ಣುಮಕ್ಕಳು ಈ ಎಣ್ಣೆಯನ್ನು ಉಪಯೋಗಿಸಿದರೆ ಏನಾಗುತ್ತದೆಂದು ಯೋಚನೆ ಮಾಡಬೇಕು ಅವರು ನೋಡುವುದಕ್ಕೆ ಚೆನ್ನಾಗಿರುತ್ತಾರೆ, ಆದರೆ ತಲೆ ಮಾತ್ರ ಹೀಗಾದರೆ ಹೇಗೆ? ಈ ದುಷ್ಪರಿಣಾಮಗಳನ್ನೆಲ್ಲಾ ನೋಡಿ, ಈ ಠರಾವನ್ನು ಈ ಮಾನ್ಯ ಸಭೆಯ ಮುಂದೆ ತರಬೇಕೆಂದು ನನಗೆ ಅನಿಸಿತು, ಈ ವೈಟ್ ಆಯಿಲ್ ಎಂಬ ಎಣ್ಣೆಯನ್ನು ಕೊಬರಿ ಎಣ್ಣೆಗೆ ಬೆರಸಿದರೆ ಚಳಿಗಾಲದಲ್ಲಿಯೂ ಕೊಬರಿಎಣ್ಣೆ ಘಟ್ಟಿಗಾಗುವುದಿಲ್ಲ, ಅಲ್ಲದೆ ಸೀಮೆಎಣ್ಣೆ ನಾಲ್ಕುಗ್ಯಾಲನ್ ಟಿನ್ ಒಂದಕ್ಕೆ 6 ರೂಪಾಯಿ ಆಗುತ್ತದೆ, ವೈಟ್ ಆಯಿಲ್ ಅದೇ ಪ್ರಮಾಣಕ್ಕೆ 24 ರೂಪಾಯಿ ಆಗುತ್ತದೆ.

(THE HON'BLE SRI K. T. BHASHYAM) oil is used mixed with hair oil ladies lose their hair. I did not know it. I am obliged to the Hon'ble Mover of the Resolution and for his keen sense of observation in the matter. We shall see as soon as we can, how this white oil menace can be combated.

Sri H. SIDDAVEERAPPA.—Cannot the local bodies be moved to take necessary steps to prevent adulteration.

The Hon'ble Sri K. T. BHASHYAM.—When we are thinking of banning it altogether, there is perhaps no need to do so.

Sri S. RANGARAMIAH.—I seek the permission of the House to withdraw my resolution.

The resolution was, by leave of the House withdrawn.

Resolution No. 4

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ನಾನು ಈ ನಿರ್ಣಯವನ್ನು ಮಂಡಿಸಲು ಇಷ್ಟಪಡುವುದಿಲ್ಲ.

RESOLUTION No. 5

Plea for abolition of Food Control and Rationing in all areas in the State except in cities of Bangalore, Mysore, Davangere and K. G. F.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ:—

"ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶ—ಈ ಸಿಟಿಗಳಲ್ಲಿ ಹೊರತು, ಸಂಸ್ಥಾನದ ಇತರ ಎಲ್ಲಾ ಪ್ರದೇಶಗಳಲ್ಲಿಯೂ ಆಹಾರದ ಹತೋಟಿಯನ್ನೂ ಮತ್ತು ಆಹಾರ ಧಾನ್ಯಗಳ ಪಡಿತರದ 'ರೇಷನಿಂಗ್' ಪದ್ಧತಿಯನ್ನೂ, ವಜಾಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ".

ಸ್ವಾಮಿ, 1943ನೆಯ ಇಸವಿಯಿಂದ ನಾವು ಆಹಾರದ ನಿಯಂತ್ರಣವನ್ನಿಟ್ಟುಕೊಂಡು ಅದರ ಸಾಧಕಬಾಧಕಗಳನ್ನು ಸಂಪೂರ್ಣವಾಗಿ ಅನುಭವಿಸಿದ್ದೇವೆಂದು ತಿಳಿದುಕೊಂಡಿದ್ದೇನೆ. ಒಂದು ವಿಷಯ ನಮ್ಮ ಅನುಭವದಿಂದ ಸ್ಪಷ್ಟಪಟ್ಟಿದೆ. ಅದೇನೆಂದರೆ, ನಮ್ಮ ದೇಶದಲ್ಲಿರತಕ್ಕಂಥ ಅನೀತಿಯುತವಾದ ವಾತಾವರಣದಲ್ಲಿ ನಿಯಂತ್ರಣ ವ್ಯವಸ್ಥೆಯನ್ನು ಈಗಿರುವುದಕ್ಕಿಂತಲೂ ತೃಪ್ತಿಕರವಾದ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಹತೋಟಿ ವ್ಯವಸ್ಥೆಯನ್ನು ಯಶಸ್ವಿಯಾಗಿ ನಡೆಸಬಹುದು. ಅದಕ್ಕೆ ಬಹಳಮಟ್ಟಿಗೆ ಅಲ್ಲಿರುವ ಜನರ ದೇಶಾಭಿಮಾನ ಮತ್ತು ಸ್ವಾರ್ಥತ್ಯಾಗ ಕಾರಣವೆಂದು ಹೇಳಬಹುದು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಹಿಂದೆ ಒಂದುಸಾರಿ ಇಂಗ್ಲೆಂಡಿನಲ್ಲಿ ಸರ್ಕಾರದ ಡಿಪೋನಲ್ಲಿ ಸಕ್ಕರೆಯಿರಲಿಲ್ಲ. ಆಗ ಹೆಚ್ಚಾಗಿ ಸಕ್ಕರೆಯನ್ನು ಹೊಂದಿರುವವರು ಸರ್ಕಾರಿ ಡಿಪೋಗೆ ಅದನ್ನು ಒಪ್ಪಿಸಬೇಕೆಂದು ಹೇಳಿದರಂತೆ. ಅದಕ್ಕೆ ಒಂದು ಆಜ್ಞೆ ಜಾರಿಯಾದ ಕೂಡಲೆ ಜನರು ತಮ್ಮಲ್ಲಿದ್ದ ಸಕ್ಕರೆಯನ್ನು ತೆಗೆದುಕೊಂಡು ಬಂದು ಕ್ಯೂ ನಿಂತು ಡಿಪೋಕ್ಕೆ ಸಕ್ಕರೆಯನ್ನು ಕೊಡುತ್ತಿದ್ದರಂತೆ. ಬಹುಶಃ ಆ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗುವುದಕ್ಕೆ ಶತಮಾನಗಳು ಕಳೆಯಬೇಕೆಂಬ ಭಾವನೆಯಿದೆ. ಆದ್ದರಿಂದ ನಮ್ಮ ದೇಶದ ನೀತಿ ಮಟ್ಟವು ಉತ್ತಮವಾಗುವವರೆಗೆ ಹತೋಟಿಯು ಸಮರ್ಪಕವಾದ ರೀತಿಯಲ್ಲಿ ನಡೆಯಲು ಸಾಧ್ಯವಾಗುವುದಿಲ್ಲ.

ಇನ್ನು ಆಹಾರದ ಹತೋಟಿ ಆಜ್ಞೆಗಳ ಸಾಧಕಬಾಧಕಗಳನ್ನು ಪರಿಶೀಲಿಸಬೇಕಾದ್ದು ಅಗತ್ಯ. ಒಂದು ಮಾತನ್ನು ಹೇಳುವುದಾದರೆ ಹತೋಟಿಯಿಂದ ಬೆಳೆಯುವವನಿಗೂ ತೃಪ್ತಿಯಿಲ್ಲ, ಕೊಳ್ಳುವವನಿಗೂ ತೃಪ್ತಿಯಿಲ್ಲ. ಇಬ್ಬರೂ ಸರ್ಕಾರವನ್ನು ಬಯ್ಯುತ್ತಾರೆ. ರೈತರು ಒಂದುಕಡೆ, ಕೊಳ್ಳುವವರು ಒಂದುಕಡೆ ಬಯ್ಯುತ್ತಿದ್ದಾರೆ. ಕೊಳ್ಳುವವರ ದೃಷ್ಟಿಯಿಂದ ಹೇಳುವುದಾದರೆ ಈಗ ಸರ್ಕಾರದವರು ಸ್ಟ್ಯಾಚ್ಯೂಟರಿ ರೇಷನಿಂಗ್, ಇನ್‌ಫಾರ್ಮಲ್ ರೇಷನಿಂಗ್ ಅಥವಾ ರೂರಲ್ ರೇಷನಿಂಗ್ ಎಂದು ಮಾಡಿದ್ದಾರೆ. ರೂರಲ್ ರೇಷನಿಂಗ್ ಇರುವ ಕಡೆ ಬಹಳ ಕಷ್ಟ. ಅಲ್ಲಿನ ಡಿಪೋಗಳಲ್ಲಿ ಕೊಳ್ಳುವವನಿಗೆ ಆಹಾರ ದವಸ ಸಿಕ್ಕುವುದೇ ಇಲ್ಲ ಎಂದು ಸಾಮಾನ್ಯವಾಗಿ ಹೇಳಬಹುದು. ಇನ್ನು ಸ್ಟ್ಯಾಚ್ಯೂಟರಿ ರೇಷನಿಂಗ್ ಇರುವ ಕಡೆ ಶೇಕಡ 75 ಜನರು ಕಾಳಸಂತೆಯಿಂದ ಮತ್ತು ಬೇರೆ ರೀತಿಯಲ್ಲಿ ದವಸ ತರಿಸಿಕೊಂಡು ರೇಷನ್ ಜೊತೆಗೆ ಸರಿಪಡಿಸಿಕೊಳ್ಳುತ್ತಿದ್ದಾರೆ. ರೇಷನ್ ಕೊಡುವುದು ಸಾಲುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಶೇಕಡ 50 ಜನರು ಕಾಳಸಂತೆಯಲ್ಲಿ ಆಹಾರ ದವಸವನ್ನು ಕೊಂಡುಕೊಳ್ಳುತ್ತಿದ್ದಾರೆ. ಅದು ಸಾಧ್ಯವಿಲ್ಲದಿರುವವರು ಹೋಟೇಲುಗಳಿಗೆ ಹೋಗಿ ತಿನ್ನುತ್ತಿದ್ದಾರೆ. ಆದ್ದರಿಂದ ಕೊಳ್ಳುವವರ ದೃಷ್ಟಿಯಿಂದ ನೋಡಿದರೆ ಈ ನಿಯಂತ್ರಣದಿಂದ ಪ್ರಯೋಜನವಾಗುತ್ತಿಲ್ಲ. ಬೆಂಗಳೂರು ಸಿಟಿಯಲ್ಲಿ ರೂಪಾಯಿಗೆ ಒಂದು ಸೇರಿನಂತೆ ಕಾಳಸಂತೆಯಲ್ಲಿ ಈಗಲೂ ಸಹ ಕೊಳ್ಳುತ್ತಿದ್ದಾರೆಂದು ಕೇಳುತ್ತೇನೆ. ಕೊಳ್ಳುವವರ ದೃಷ್ಟಿಯಿಂದ ಇಷ್ಟು ಕಷ್ಟವಿದೆ.

ಇನ್ನು ಬೆಳೆಯುವವರ ದೃಷ್ಟಿಯಿಂದ ನೋಡೋಣ. 1943ರಿಂದ ಕಂಟ್ರೋಲ್ ಬಂದಮೇಲೆ ರೈತರಿಗೆ ಬಹಳ ಕಷ್ಟವಾಗಿದೆ. ಶ್ಯಾನುಭೋಗರಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೂ ಎಲ್ಲ ಅಧಿಕಾರಿಗಳೂ ರೈತರನ್ನು ಹಿಂಸೆಮಾಡುತ್ತಿದ್ದಾರೆ. ಇಲಾಖಾ ನೌಕರರು, ಫುಡ್ ಇನ್‌ಸ್ಪೆಕ್ಟರು ಮತ್ತು ಇತರ ಸಣ್ಣಪುಟ್ಟ ಅಧಿಕಾರಿಗಳು ನಾನಾ ರೀತಿಯಲ್ಲಿ ಕಷ್ಟ ಕೊಡುತ್ತಾರೆ. ಬತ್ತವನ್ನು ಅಕ್ಕಿ ಮಾಡಿಸಬೇಕಾದರೆ ಕಷ್ಟ. ದವಸವನ್ನು ಸಾಗಿಸುವುದು ಕಷ್ಟ. ಅನೇಕ ಕಡೆ ಇದಕ್ಕೆ ಪರ್ಮಿಟ್ ಪಡೆಯಬೇಕಾದರೆ ರೆವೆನ್ಯೂ ಇನ್‌ಸ್ಪೆಕ್ಟರು ವಗೈರೆ ಅಧಿಕಾರಿಗಳ ಬಳಿಗೆ ಹತ್ತಾರು ಸಾರಿ ತಿರುಗಬೇಕು. ಒಂದು ಸಲ ಹೋದರೆ ಕೆಲಸವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಇದಕ್ಕೆ ಸ್ವಲ್ಪ ವೆಚ್ಚಮಾಡಬೇಕಾಗಿದೆಯೆಂದೂ ಕೇಳಿದ್ದೇನೆ.

ಆಮೇಲೆ ಆಹಾರ ಹತೋಟಿ ಆಜ್ಞೆ ಪ್ರಕಾರ ಕೇಸು ಹಾಕುವ ವಿಷಯದಲ್ಲಿ ಒಂದು ಮಾತನ್ನು ಹೇಳದಿದ್ದರೆ ಕರ್ತವ್ಯಲೋಪವಾಗುತ್ತದೆ. ಅಲ್ಲಲ್ಲಿ ನಿಜವಾಗಿಯೂ ಕಾಳಸಂತೆ ಮಾಡುವವರನ್ನು ಹಿಡಿದು ಕೇಸು ಹಾಕುತ್ತಿದ್ದಾರೆ. ಆದರೆ ಹೆಚ್ಚು ಮಂದಿ ಕಾಳಸಂತೆಗೆ ಪ್ರವೇಶ ಮಾಡುವವರು ಸಿಕ್ಕುತ್ತಿಲ್ಲ. ಕಾನೂನು ತಿಳಿಯದೆ ಅಜ್ಞಾನದಿಂದ ಅನೇಕರು ಶಿಕ್ಷೆಗೆ ಗುರಿಯಾಗುತ್ತಿದ್ದಾರೆ. ತೀರ್ಥಹಳ್ಳಿಯಿಂದ ಹಾಸ್ಟೆಲ್ಲಿಗೆ ಓದುವ ಮಕ್ಕಳಿಗಾಗಿ 40 ಸೇರು ಆಹಾರ ಪದಾರ್ಥವನ್ನು ಸಾಗಿಸುತ್ತಿದ್ದಾಗ ಅದನ್ನು ಹಿಡಿದಿದ್ದಾರೆ. ಇನ್ನೂ ಎರಡು ಕಡೆ ಹಿಡುವಳಿಯಿಂದ ಮನೆಗೆ ತೆಗೆದುಕೊಂಡು ಹೋಗುತ್ತಿದ್ದುದನ್ನು ಹಿಡಿದು ಕೇಸುಮಾಡಿದ್ದಾರೆ. ಹೀಗೆ ಅನೇಕ ಕೇಸುಗಳು ದಾಖಲಾಗಿವೆ. ಮಾನ್ಯ ಆಹಾರ ಸಚಿವರು ಅಜ್ಞಾನದಿಂದ ಕಾನೂನು ತಿಳಿಯದೆ ಮಾಡುವವರಿಗೆ ಮತ್ತು ಅಂಥ ಕೆಲವು ಇತರ ಸಂದರ್ಭಗಳಲ್ಲಿ ತೊಂದರೆ ಮಾಡಿ ಕೇಸು ಹಾಕಬಾರದು ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆಂದು 1948ನೆಯ ಇಸವಿಯಿಂದಲೂ ಹೇಳುತ್ತಲೇ ಇದ್ದಾರೆ. ಆದಾಗ್ಯೂ ಕೂಡ ಬಹು ಭಾಗದ ಜನರಿಗೆ ಮತ್ತು ರೈತರಿಗೆ ತೊಂದರೆ ಬಹಳವಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಕಂಟ್ರೋಲ್ ಆಜ್ಞೆ ವಿನಾ ಯಾವುದೂ ಮಾಡುವುದಕ್ಕಾಗುವುದಿಲ್ಲ. 25 ಜನರಿಗಿಂತ ಹೆಚ್ಚು ಮಂದಿಯನ್ನು ಆಹ್ವಾನಮಾಡಿ ಔತಣ ಮುಂತಾದ ಸತ್ಕಾರ ಕೂಟಗಳನ್ನೇರ್ಪಡಿಸಬಾರದೆಂದಿದೆ. ಆದರೆ ಅದನ್ನು ಎಷ್ಟು ಮಂದಿ ಗೌರವಿಸಿದ್ದಾರೆ? ಬರೀ ರೇಷನಿಂದ ಬದುಕಿರುವವರು ಎಷ್ಟು ಜನರಿದ್ದಾರೆ? ಈ ದಿವಸ ಖಂಡಿತವಾಗಿ ಹೇಳುವುದಾದರೆ ನಮ್ಮಗಳ ಪೈಕಿ ಶೇಕಡ 50 ಮಂಧಿ ಬರೀ ರೇಷನಿಂದ ಜೀವನ ನಡೆಸುತ್ತಿಲ್ಲ. ಇತರ ವಿಧವಾದ ಆಹಾರ ಪದಾರ್ಥಗಳ ಸಹಾಯದಿಂದ ಅಥವಾ ಬೇರೆ ರೀತಿಯಿಂದ ಆಹಾರ ಧಾನ್ಯವನ್ನೊದಗಿಸಿಕೊಂಡು ಜೀವನ ಜರುಗಿಸುತ್ತಿದ್ದೇವೆ. ಸರ್ಕಾರದವರು ಕೊಡುವ ಕೆಲವು ಔನ್ಸ್ ಆಹಾರ ನನ್ನಂಥವರಿಗೆ ಸಾಕಾಗಬಹುದು. ಆದರೆ ನಮ್ಮ ಮಿತ್ರರಾದ ಶ್ರೀ ಭೀಮಪ್ಪನಾಯಕರಂಥವರಿಗೆ ಅದು ಸಾಕಾಗುವುದಿಲ್ಲ.

Sri A. BHEEMAPPA NAIK.—Lean and hungry look!

Sri Kadidal MANJAPPA.—Look may be hungry but not a hungry stomach.

Sri V. S. NARAYANA RAO.—I question that statement, Sir. (Laughter)

ಶ್ರೀ ಕಡಿದಾಳ್ ಮಂಜಪ್ಪನವರು.—ಆದ್ದರಿಂದ ಬೆಳೆಯುವವರ ಅಥವಾ ಕೊಳ್ಳುವವರ ದೃಷ್ಟಿಯಿಂದ—ಯಾರ ದೃಷ್ಟಿಯಿಂದ ನೋಡಿದರೂ ಸಹ ಕಂಟ್ರೋಲನ್ನು ಆದಷ್ಟು ಜಾಗ್ರತೆ ತೆಗೆಯುವುದು ಅತ್ಯಾವಶ್ಯಕ. ಆದರೆ ತೆಗೆಯುವಾಗ ಸ್ವಲ್ಪ ಜಾಗರೂಕತೆಯಿಂದ ತೆಗೆಯಬೇಕಾಗುತ್ತದೆ. ಅದಕ್ಕೇ ನನ್ನ ನಿರ್ಣಯದಲ್ಲಿ ಬೆಂಗಳೂರು, ಮೈಸೂರು, ಕೋಲಾರ, ದಾವಣಗೆರೆ ಈ ಸಿಟಿಗಳಲ್ಲಿ ವಿನಾ ಬಾಕಿಕಡೆ ಕಂಟ್ರೋಲನ್ನು ಮೊದಲು ರದ್ದುಪಡಿಸಬೇಕೆಂದು ಕೇಳಿರುವುದು. ತಕ್ಷಣ ಹತೋಟಿ ತೆಗೆದರೆ ಈ ಸಿಟಿಗಳಲ್ಲಿ ಒಂದು ಅಲ್ಲಕಲ್ಲೋಲ ಪರಿಸ್ಥಿತಿಯೊದಗಬಹುದು. ಆದ್ದರಿಂದ ಸಿಟಿಗಳಲ್ಲಿರುವ ಜನರಿಗೆ ಆಹಾರ ದವಸ ಒದಗಿಸುವುದಕ್ಕೆ ಒಂದು ವ್ಯವಸ್ಥೆಯನ್ನಿಟ್ಟುಕೊಂಡು ಬಾಕಿ ಪ್ರದೇಶದಲ್ಲಿ ಕಂಟ್ರೋಲನ್ನು ವಜಾ ಮಾಡುವುದು ಸೂಕ್ತ. ರೈತನನ್ನು ಇಂದು ನಾವಾಗಿಯೇ ಕಷ್ಟಕ್ಕೆ ಗುರಿಪಡಿಸುವುದು ಸಾಧುವಾದುದಲ್ಲ ಎಂದು ಹೇಳಿ ಈ ನಿರ್ಣಯವನ್ನು ಮಾನ್ಯ ಸಭೆಯ ಒಪ್ಪಿಗೆಗಾಗಿ ಮಂಡಿಸುತ್ತೇನೆ.

ಅಧ್ಯಕ್ಷರು.—Resolution moved.—

"ಮೈಸೂರು, ಬೆಂಗಳೂರು, ದಾವಣಗೆರೆ, ಮತ್ತು ಕೋಲಾರದ ಚಿನ್ನದಗಣಿ ಪ್ರದೇಶ—ಈ ಸಿಟಿಗಳಲ್ಲಿ ಹೊರತು, ಸಂಸ್ಥಾನದ ಇತರ ಎಲ್ಲಾ ಪ್ರದೇಶಗಳಲ್ಲಿಯೂ ಆಹಾರದ ಹತೋಟಿಯನ್ನೂ ಮತ್ತು ಆಹಾರ ಧಾನ್ಯಗಳ ಪಡಿತರದ 'ರೇಷನಿಂಗ್' ಪದ್ಧತಿಯನ್ನೂ ವಜಾ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಹತೋಟಿ ಮತ್ತು ಪಡಿತರದ ಸಂಬಂಧವಾಗಿ ಶ್ರೀ ಕಡಿದಾಳ್ ಮಂಜಪ್ಪನವರು ತಂದಿರತಕ್ಕಂಥ ನಿರ್ಣಯವನ್ನು ಪರಿಶೀಲಿಸುವುದಕ್ಕೆ ಮೊದಲು ಈ ಸಭೆಯವರ ಗಮನಕ್ಕೆ ಒಂದು ಅಂಶವನ್ನು ತರಬೇಕೆಂದು ಅಪೇಕ್ಷೆಪಡುತ್ತೇನೆ. ಈ ವಿಚಾರ ಈ ಸಭೆಯ ಹಿಂದಿನ ಅಧಿವೇಶನಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಚರ್ಚೆಮಾಡಿದ್ದೇವೆ. ಅದರಲ್ಲೂ ಜನವರಿ ತಿಂಗಳಲ್ಲಿ ಸೇರಿದ್ದ ಅಧಿವೇಶನದಲ್ಲಿ ಈ ವಿಚಾರಕ್ಕಾಗಿಯೇ ಒಂದು ಪೂರ್ತಿ ದಿನವನ್ನು ಕೊಟ್ಟಿದ್ದರು. ಎಲ್ಲಾ ಅಂಶಗಳನ್ನೂ ಕುರಿತು ಈ ಸಭೆಯ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದವರೂ ಕೂಡ ತಮ್ಮ ಅಭಿಪ್ರಾಯವನ್ನು ಹೊರಗೆಡವಿದ್ದಾರೆ. ಕಡೆಯಲ್ಲಿ ಈ ಸಭೆಯವರೂ ಆಹಾರ ಮಂತ್ರಿಗಳವರೂ ಒಂದು ವಿಧವಾದಂಥ ಒಪ್ಪಿಗೆಗೆ ಬಂದಹಾಗೆ ಆ ಚರ್ಚೆಯನ್ನು ನಾವು ಮುಕ್ತಾಯಗೊಳಿಸಿದ್ದೇವೆ. ಸಾಮಾನ್ಯವಾಗಿ ಯಾವುದಾದರೂ ಒಂದು ವಿಷಯದಲ್ಲಿ ಒಂದು ತೀರ್ಮಾನಕ್ಕೆ ಈ ಸಭೆಯವರು ಬಂದರೆ ಅದನ್ನು ಒಂದು ವರ್ಷದ ಅವಧಿಯಲ್ಲಿ ಮತ್ತೆ ಚರ್ಚೆ ಮಾಡಬಾರದು ಎಂದು ಕಾನೂನಿರಬೇಕು. ಆದರೆ ಆಗ ಒಂದು ತೀರ್ಮಾನಕ್ಕೆ ನಾವು ಬರಲಿಲ್ಲ ಎಂಬುದು ಎಲ್ಲಾ ಸದಸ್ಯರಿಗೂ ಜ್ಞಾಪಕದಲ್ಲಿರಬಹುದು.

ಈ ಪಡಿತರ ಪೂರ್ಣವಾಗಿ ಹೋಗಬೇಕು. ಹತೋಟಿ ಆಜ್ಞೆಗಳು ಪೂರ್ಣವಾಗಿ ಹೋಗಬೇಕು ಎಂಬುದಾಗಿ ಹೋದ ಅಧಿವೇಶನದಲ್ಲಿ ಎಲ್ಲಾ ಸದಸ್ಯರೂ ಒತ್ತಾಯಪಡಿಸಿದರು. ಕಡೆಯದಾಗಿ ಸರ್ಕಾರದವರ ಅಭಿಪ್ರಾಯ ಹೊರಬಿದ್ದಮೇಲೆ, ಸರ್ಕಾರದವರಿಗೆ ಹತೋಟಿ ಆಜ್ಞೆ ಇಟ್ಟುಕೊಳ್ಳುವುದಕ್ಕಾಗಲೀ, ಪಡಿತರ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಲೀ ಇಷ್ಟವಿಲ್ಲದೇ ಇದ್ದರೂ, ಯತ್ನವಿಲ್ಲದೆ ಆ ಕಾರ್ಯ ಕೈಕೊಂಡು ಕೇಂದ್ರ ಸರ್ಕಾರದವರ ನೀತಿಯನ್ನು ಅನುಸರಿಸಿ ನಡೆದುಕೊಳ್ಳಬೇಕಾಗಿದೆಯಾದ್ದರಿಂದ ಕಾಲಕ್ರಮದಲ್ಲಿ ಅದು ಹೋಗುತ್ತದೆ ಎಂಬ ಭಾವನೆ ವ್ಯಕ್ತವಾಗುತ್ತದೆ. ಈ ದಿನವೇ ಹತೋಟಿ ಆಜ್ಞೆಗಳು ಹೋಗ ವುದಾಗಲೀ, ಪಡಿತರ ನಿಲ್ಲಿಸುವುದಾಗಲೀ ಆದರೆ ಜನಗಳಿಗೆ ತೊಂದರೆಯಾಗಬಹುದು. ಈ ಎಲ್ಲಾ ದೃಷ್ಟಿಯನ್ನಿಟ್ಟುಕೊಂಡು ಕಾಲಕ್ರಮದಲ್ಲಿ ಪಡಿತರ ಅಥವಾ ಹತೋಟಿ ಆಜ್ಞೆಗಳನ್ನು ಸಡಿಲಮಾಡುವುದು ಒಳ್ಳೆಯದೆಂಬ ಅಭಿಪ್ರಾಯವನ್ನು ಸರ್ಕಾರದವರು ವ್ಯಕ್ತಪಡಿಸಿದಮೇಲೆ ಅದನ್ನು ಈ ಸಭೆಯವರು ಅಂಗೀಕರಿಸಿದಹಾಗೆ ನನಗೆ ಜ್ಞಾಪಕವಿದೆ. ಇದಕ್ಕೆ ಕೆಲವು ಮಾರ್ಗಗಳನ್ನು ಅನುಸರಿಸುವುದಾಗಿ ಆಹಾರ ಮಂತ್ರಿಗಳು ಗುಟ್ಟಾಗಿ ಈ ಸಭೆಯಲ್ಲಿ ಬಹಿರಂಗಪಡಿಸಿದರು. ಅದೇನೆಂದರೆ ಈಗ ಆಹಾರ ಶೇಖರಣೆಯ ಕಾಲವಾಗಿದೆ, ಈ ಕಾಲದಲ್ಲಿ ನಾವು

ಬೇಕು. ಅಲ್ಲಿಂದ ತರುವುದಕ್ಕೆ ಕಾರಣ ಇಷ್ಟೆ. ನಮ್ಮ ಕಡೆ ಜೋಳ ತಿಂದು ಅಭ್ಯಾಸವಿಲ್ಲ. ಚಿತ್ರದುರ್ಗದ ಕಡೆ ರಾಗಿ ತಿಂದು ಅಭ್ಯಾಸವಿಲ್ಲ. ಅವರಿಗೆ ಸ್ವಲ್ಪ ರಾಗಿ ಕೊಡುತ್ತಾರೆ, ನಮಗೆ ಸ್ವಲ್ಪ ಜೋಳ ಕೊಡುತ್ತಾರೆ. ಎಂದರೆ ಏನಾಯಿತು ಹೊರಗಡೆಯಿಂದ ತಂದದ್ದರಲ್ಲಿ, ಹಳ್ಳಿಗಳಿಂದ ಶೇಖರಣೆ ಮಾಡಿ ತೆಗೆದುಕೊಂಡು ಬರುವುದನ್ನು make up ಮಾಡುವುದಕ್ಕೋಸ್ಕರ ಕೊಡುತ್ತಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಅದೂ ಅಲ್ಲದೆ ಹೊರಗಡೆಯಿಂದ ಒಂದೇ ಸಾರಿ ಬರುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ಹೊರಗಡೆಯಿಂದ ತಂದಿದ್ದನ್ನು ಮಾತ್ರ ಪಟ್ಟಣದವರಿಗೆ ಕೊಡಿ ಎಂದರೆ ಅದು ಅವರಿಗೆ ಸಾಕಾಗುವುದಿಲ್ಲ. ನಮ್ಮ ದೇಶದಲ್ಲಿ ಹಳ್ಳಿಯವರಿಂದ ಶೇಖರಣೆ ಮಾಡಿದ್ದನ್ನು ಸೇರಿಸಿಕೊಂಡು ಈಗ ಪಡಿತರವನ್ನು 9 ಔನ್ಸ್‌ಗಿಂತ ಸ್ವಲ್ಪ ಜಾಸ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದು ನಿಜವೋ ಸುಳ್ಳೋ ಗೊತ್ತಿಲ್ಲ. ಆ ವಿಚಾರದಲ್ಲಿ ಆಹಾರ ಮಂತ್ರಿಗಳು ಭರವಸೆ ಹೇಳುತ್ತಾರೆಂದು ಕಾಣುತ್ತದೆ.

ಒಟ್ಟಿನಲ್ಲಿ ಈ ನಿರ್ಣಯದಲ್ಲಡಗಿರುವ ಅಂಶಗಳನ್ನೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಇದು ಸೂಕ್ತವಾಗಿಲ್ಲ, ಈ ನಿರ್ಣಯವನ್ನು ಮಾನ್ಯ ಸದಸ್ಯರು ಒತ್ತಾಯಪಡಿಸಬಾರದೆಂದು ನಾನು ಸೂಚಿಸುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಸ್ವಾಮಿ, ನಾನು ಹೆಚ್ಚೇನೂ ಮಾತನಾಡುವುದಿಲ್ಲ, ಸಂಕ್ಷೇಪವಾಗಿ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಶ್ರೀಮಾನ್ ವೀರಣ್ಣಗೌಡರು ಒಂದು ವಿಷಯವನ್ನು ಹೇಳಿದರು, ಅದು ನನಗೆ ಗೊತ್ತಾಗಲಿಲ್ಲ. ಈ ನಿರ್ಣಯದಲ್ಲಿರುವುದು ನಾಲ್ಕೈದು ಪಟ್ಟಣಗಳಲ್ಲಿಟ್ಟುಕೊಂಡು ಮಿಕ್ಕ ಕಡೆ ರೇಷನಿಂಗ್ ತೆಗೆಯಿರಿ ಎಂದು. ಇತರ ಕಡೆಗಳಲ್ಲಿ ಈಗ informal rationing ಇದ್ದರೂ ಅವರಿಗೆ ಎಷ್ಟು ಅವಶ್ಯಕವೋ, ಎಷ್ಟು ಕೊಡಬೇಕೋ ಅಷ್ಟನ್ನು ಈಗಲೂ ಕೊಡುತ್ತಲೇ ಇಲ್ಲ. ಅವರಿಗೆ ಸರಿಯಾಗಿ ರೇಷನ್ ಸಿಕ್ಕುತ್ತದೆಂಬ ಚಪಲವನ್ನು ಅವರು ಇಟ್ಟುಕೊಂಡರೆ ಅವರ ಗತಿ ಏನಾಗುತ್ತದೆಯೊ! ಅಲ್ಲಿ ಅಲ್ಪ ಸ್ವಲ್ಪ ಜನರಿಗೆ ಸಿಕ್ಕುತ್ತದೆಂದು ಹೇಳಿದರೆ, ಯಾರಿಗೆ ಸಿಕ್ಕುತ್ತದೆ? ಯಾರ್ಯಾರಿಗೆ ಸ್ವಲ್ಪ ಬಾಯಿ ಇರುತ್ತದೆಯೋ ಅಂಥವರಿಗೆ ಸಿಕ್ಕುತ್ತದೆ. ನಾನು ಗ್ರಾಮಾಂತರ ಪ್ರದೇಶಗಳ ವಿಚಾರ ಮಾತನಾಡುತ್ತಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಗ್ರಾಮಾಂತರ, ಎಂದರೆ ಬರಿಯ ಹಳ್ಳಿಗಳಲ್ಲ, ಟೌನುಗಳೂ ಸೇರಿವೆ. ಉದಾಹರಣೆಗೆ ಮದ್ದೂರಿನಲ್ಲಿ ಡಿಪೋ ಇದೆ, ಅಲ್ಲಿ ಸುತ್ತಮುತ್ತಿನ ಹಳ್ಳಿಗಳವರೂ ಬಂದು ತೆಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನು ಹೇಳುವುದಿಷ್ಟೆ; ಗ್ರಾಮಾಂತರ ಪ್ರದೇಶಗಳಲ್ಲಿಯೂ, ಸಣ್ಣ ಟೌನ್‌ಗಳಲ್ಲಿಯೂ ನೀವು ಕೊಡತಕ್ಕ ರೇಷನ್‌ನಿಂದಲೇ ಬದುಕಿದ್ದಾರೆಂಬ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ಸಿಟಿಗಳಲ್ಲಿರುವವರೂ ಕೆಲವರು ಹಳ್ಳಿಗಳಿಗೆ ಹೋಗಿ ಎಷ್ಟೋ ಕೊಂಡುಕೊಂಡು ಬರುತ್ತಿದ್ದಾರೆ. ನೀವು ಹತ್ತು ಹದಿನೈದು ಸೇರು ತೆಗೆದುಕೊಂಡು ಬರುವ ಬಡಪಾಯಿಗಳನ್ನು ಮಾತ್ರ ಹಿಡಿಯುತ್ತೀರಿ, ದೊಡ್ಡವರು ಸಿಕ್ಕುವುದೇ ಇಲ್ಲ. ಇದು ಹಾಗಿರಲಿ, ಈ ಕಂಟ್ರೋಲ್‌ನಿಂದ natural trade channels ನ್ನು ಮುಚ್ಚಿದ್ದೀರಿ. ಸಾಮಾನ್ಯವಾಗಿ ಬತ್ತದ ಸೀಮೆಯವರು ರಾಗಿ ಸೀಮೆಗೆ ಹೋಗಿ ರಾಗಿಯನ್ನು ಕೊಂಡುಕೊಂಡು ಬರುತ್ತಾರೆ. ಸಿಟಿಗಳಿಗೆ ಬೇಕಾಗುವುದನ್ನು ಬೇಕಾದರೆ ಹಳ್ಳಿಗಳಲ್ಲಿ ಹೋಗಿ ಕೊಂಡುಕೊಂಡು ತರಲಿ. ಸ್ವಲ್ಪ ಹೆಚ್ಚು ಬೆಲೆಯನ್ನು ಅವರಿಗೆ ಕೊಟ್ಟರೆ ಕೊಡುತ್ತಾರೆ. ಹೆಚ್ಚಾಗಿ ಬೆಳೆಯುವವರನ್ನು ಬಿಡದೆ ಅವರಿಂದ ವಸೂಲು ಮಾಡಬೇಕು. ಇದು ಬಿಟ್ಟು ಎಲ್ಲ ಕಡೆಯೂ ಶೇಖರಣೆಯನ್ನು ಇಟ್ಟುಕೊಂಡು ಜನರಿಗೇಕೆ ತೊಂದರೆ ಕೊಡುವುದು. ಸಣ್ಣ ಅಧಿಕಾರಿಗಳು ಜನರಿಗೆ ಕೊಡತಕ್ಕ ಕಿರುಕುಳ ಸರ್ಕಾರಕ್ಕೆ ಗೊತ್ತಾಗುವುದಿಲ್ಲ. ಯಾವ ಹಳ್ಳಿಗಳಿಗೂ ಹೋಗಿ ಅನುಭವವಿಲ್ಲವೆಂದು ಕಾಣುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಕಂಟ್ರೋಲ್ ಜಾರಿಗೆ ಬಂದದ್ದು 1944ನೆಯ ಇಸವಿಯಲ್ಲಿ ಎಂಬುದು ತಮಗೆ ಗೊತ್ತಿದೆ. ಆಗ ನಾನು ಇದೇ ವಿಷಯವನ್ನು ಸಭೆಯಲ್ಲಿ ಹೇಳಿದ್ದೇನೆ. ಹಳ್ಳಿಯವರಿಗೆ ಕಿರುಕುಳ ಕೊಡುವುದು ನಿಮಗೆ ಗೊತ್ತಾಗುವುದಿಲ್ಲವೆಂದು ಹೇಳಿದಾಗ ತಾವು ಇಲ್ಲ, ಇಲ್ಲ ಎಂದು ಹೇಳಿದ್ದೀರಿ. ಈಗ ತಾವೇ ಹೀಗೆ ಹೇಳುತ್ತಿದ್ದೀರಿ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸು ಮತ್ತು ಕೈಗಾರಿಕೆ ಸಚಿವರು).—ತಾರು ರಸ್ತೆಯ ಮೇಲೆ ಬತ್ತ ಬೆಳೆಯುವುದಿಲ್ಲವೆಂದು ತಮ್ಮ ಸಹೋದ್ಯೋಗಿಗಳು ಹೇಳಿದ್ದು ಜ್ಞಾಪಕವಿಲ್ಲವೆ?

Sri A. BHEEMAPPA NAIK.—Then there was no joint responsibility.

The Hon'ble Sri T. MARIAPPA.—They had individual responsibility and independence.

Sri H. B. GUNDAPPA GOWDA.—We enjoyed more independence than any of you here. At least we had complete independence.

(Sri B. Chennabyre Gowda attempted to intervene.)

Mr. SPEAKER.—Sri Gundappa Gowda can defend himself.

The Hon'ble Sri T. MARIAPPA.—Sri Channabyre Gowda may not understand the repartee.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆಗ ನಮಗಿದ್ದಷ್ಟು ಸ್ವಾತಂತ್ರ್ಯ ಈಗ ಮಂತ್ರಿಗಳಿಗೂ ಇಲ್ಲ, ಸದಸ್ಯರಿಗೂ ಇಲ್ಲ! ಅದು ಬೇರೆ ಮಾತು, ನಾನು ಏನು ಹೇಳಬೇಕೋ ಅದನ್ನು ಹೇಳಲು ಅವಕಾಶ ಕೊಡಿ.

Trade channels ತಡೆಯಬೇಡಿ, ತಡೆಯುವುದರಿಂದ ಅನ್ಯಾಯವಾಗುತ್ತದೆ. ಉದಾಹರಣೆಗೆ ಕೊಡಗಿನಲ್ಲಿ ಬೇಕಾದಷ್ಟು ಬತ್ತ ಬೆಳೆಯುತ್ತದೆ, ಅವರಿಗೆ ಬೇರೆ ಕಾಳುಗಳು ಬೇಕು. ಇದನ್ನು ಪಡೆಯಬೇಕಾದರೆ ಅವರು ಸಕಲೇಶಪುರ, ಮಂಜರಾಬಾದು, ಹಾಸನ ಜಿಲ್ಲೆಯ ಇತರ ಭಾಗಗಳಿಗೆ ಹೋಗಬೇಕಾಗುತ್ತದೆ. ಅಥವ ಬೇರೆ ಕಡೆ ಹೋಗಬೇಕಾಗುತ್ತದೆ. ಆದರೆ ಈ ರೀತಿ trade channals ಗೆ ಅಡ್ಡಿ ಮಾಡಿದರೆ, ಸರ್ಕಾರಕ್ಕೂ ರೈತರಿಗೂ ವ್ಯಾಪಾರಿಗಳಿಗೂ ತೊಂದರೆಯಾಗುತ್ತದೆ. ಸರ್ಕಾರದವರು ಬೇಕಾದರೆ ಸರ್‌ಪ್ಲಸ್ ಹೋಲ್ಡರುಗಳಿಂದ ಧಾನ್ಯವನ್ನು ತೆಗೆದುಕೊಳ್ಳಲಿ, ಅವರ ಮನಸ್ಸಿನಲ್ಲಿ ಎಷ್ಟೋ ಒಳ್ಳೆಯ ಉದ್ದೇಶವಿದ್ದರೂ ಈಗ ಅನುಸರಿಸುತ್ತಿರುವ ಮಾರ್ಗದಿಂದ ಹಳ್ಳಿಗಳಿಗೆ ರೇಷನ್ ಕೊಟ್ಟು ತೃಪ್ತಿಪಡಿಸಲು ಅವರಿಗೆ ಸಾಧ್ಯವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಹೊಟ್ಟೆಗಿಲ್ಲದೆ ಸಾಯುವುದನ್ನು ತಪ್ಪಿಸುವುದು ಸಾಧ್ಯ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಮ್ಮ ಮೈಸೂರು ದೇಶ ಅಷ್ಟೇನೂ ಕೇಡಾಗಿಲ್ಲ, ಹೇಗೋ ಅಲ್ಲಲ್ಲೇ adjust ಆಗುತ್ತದೆ. ಸುಮ್ಮನೆ ಭೂತಾಕಾರದ ಮಾತುಗಳನ್ನಾಡುವುದರಿಂದೇನು ಪ್ರಯೋಜನ!

ಪಟ್ಟಣಗಳಿಗೆ ಬೇಕಾದಷ್ಟನ್ನು ಹಳ್ಳಿಯ ರೈತರಿಗೆ ಸ್ವಲ್ಪ ಹೆಚ್ಚು ಧಾರಣೆ ಕೊಟ್ಟರೆ ಕೊಡುತ್ತಾರೆ, ಅದನ್ನು ಬೇಕಾದರೆ ರಿಜರ್ವ್ ಮಾಡಿಕೊಳ್ಳಬಹುದು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಕಾಲದಲ್ಲಿ ಪಲ್ಲಕ್ಕೆ 14 ರೂಪಾಯಿ ಕೊಡುತ್ತಿದ್ದಿರಿ, ಈ ಹೊತ್ತು 21 ರೂಪಾಯಿ ಕೊಡುತ್ತಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಮ್ಮ ಕಾಲದಲ್ಲಿ ಮಳೆ ಬೆಳೆಗಳು ಚೆನ್ನಾಗಿದ್ದವು..................

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಮ್ಮ ಕಾಲದಲ್ಲಿ 1945 ರಲ್ಲಿ ಕ್ಷಾಮ ಬೇರೆ ಬಂದಿತ್ತು!

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಅವರ ಕಾಲದಲ್ಲಿ ಸರ್ಕಾರಂದ ಬೊಕ್ಕಸದಲ್ಲಿ ಲಕ್ಷಾಂತರ ರೂಪಾಯಿ ಹಣವಿತ್ತು. ಆದರೆ ಈಗ!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನೀವು ಜನರಿಗೆ ಭೂಲೋಕದಲ್ಲೇ ಸ್ವರ್ಗತೋರಿಸುತ್ತೇವೆಂದು ಹೇಳುತ್ತಿದ್ದೀರಿ, ಆದರೆ ನಾವು ಹಾಗೆ ಹೇಳುತ್ತಿರಲಿಲ್ಲ, ಆಗೇನೋ ನನಗೆ ಅವಕಾಶವಿರುತ್ತಿರಲಿಲ್ಲ. ಈಗ ಹಳ್ಳಿಗಳ ಸಂಬಂಧವನ್ನಿಟ್ಟುಕೊಂಡಿದ್ದೇನೆ. ಅಲ್ಲಿನ ಸ್ಥಿತಿಗತಿಗಳು ನನಗೆ ಚೆನ್ನಾಗಿ ಗೊತ್ತಿದೆ. ಸಣ್ಣಪುಟ್ಟ ಅಧಿಕಾರಿಗಳು ಅಲ್ಲಿ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಿದರೆ ಹೆಚ್ಚು ಬೆಳೆ ಬೆಳೆಯುವ ಯೋಜನೆಗೂ ಅನುಕೂಲವಾಗುತ್ತದೆ, ರೈತರಿಗೂ ಬಹಳ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈಗ ಗ್ರಾಮಾಂತರಗಳಲ್ಲಿ ಎಷ್ಟೋ ಅನ್ಯಾಯ ನಡೆಯುತ್ತಿದೆ, ಹೆಚ್ಚಾಗಿ ಬೆಳೆದಿರುವುದನ್ನು ಬಿಟ್ಟುಬಿಡುತ್ತಾರೆ, ಅಲ್ಪಸ್ವಲ್ಪ ಬೆಳೆದವನ ಹತ್ತಿರ ಇರುವುದನ್ನೆಲ್ಲಾ ಕಿತ್ತುಕೊಳ್ಳುತ್ತಾರೆ. ಇದನ್ನೆಲ್ಲಾ ತಪ್ಪಿಸಿ ನಿಮ್ಮ ಪಟ್ಟಣಗಳಿಗೆ ಬೇಕಾದಷ್ಟು ಇಟ್ಟುಕೊಳ್ಳಿ, ಹಳ್ಳಿಗಳಲ್ಲಿರುವುದನ್ನು ಅವರಿಗೆ ಬಿಟ್ಟುಬಿಡಿ, ಆಮೇಲೆ ನೋಡಿ ಹೇಗಾಗುತ್ತದೆ. ಇದಕ್ಕೆ ಇಂಡಿಯಾ ಸರ್ಕಾರದವರೇನೂ ಅಡ್ಡಿ ಬರುವುದಿಲ್ಲ. ಏಕೆಂದರೆ ಇತರ ಕೆಲವು ಪ್ರಾಂತಗಳವರೂ ಹೀಗೆ ಮಾಡಿದ್ದಾರೆ. ಮದ್ರಾಸಿನಲ್ಲಿ ಕ್ಷಾಮವಿದ್ದವ ಕಾಲದಲ್ಲೇ ಹೀಗೆ ಮಾಡಿದರು. ನಮ್ಮ ದೇಶದಲ್ಲಿ ಅಂತಹ ದಿಗಿಲಗೇನೂ ಅವಕಾಶವಿಲ್ಲ. ನಮ್ಮ ದೇಶದಿಂದ ಘಟ್ಟದ ತಗ್ಗಿಗೆ, ಕೊಯಮತ್ತೂರು, ಕೊಳ್ಳೇಗಾಲ ಇಂತಹ ಕಡೆಗಳಿಗೆ ಹೋಗುವುದನ್ನು ತಡೆದು ತಪ್ಪಿಸಿದರೆ ಸಾಕು ಏಳೆಂಟು ಗಂಡಿ ಮಾರ್ಗಗಳನ್ನು ಬಿಗಿ ಮಾಡಿದರೆ ಸಾಕು, ಪರೀಕ್ಷೆ ಮಾಡಲು ಗ್ರಾಮಾಂತರ ಪ್ರದೇಶಗಳಲ್ಲಿ ಈ ಹತೋಟಿಯನ್ನು ತೆಗೆಯಿರಿ, ನಿಮ್ಮ ಸ್ವಂತ ಬುದ್ಧಿಯನ್ನು ಉಪಯೋಗಿಸಿ ಇಂಡಿಯಾ ಸರ್ಕಾರಕ್ಕೂ ತೋರಿಸಬಹುದು. ಇದರಿಂದ ನಿಮಗೂ ಒಳ್ಳೆಯದು. ಇಷ್ಟು ಮಾತ್ರ ನಾನು ಹೇಳುವುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಆಹಾರ ನೀತಿಯ ವಿಚಾರದಲ್ಲಿ ಸರ್ಕಾರ ತನ್ನ ಅಭಿಪ್ರಾಯಗಳನ್ನು ಬದಲಾವಣೆ ಮಾಡಬೇಕೆಂದು ಅನೇಕ ವೇಳೆ ಈ ಸಭೆಯಲ್ಲೂ ಹೊರಗೂ ಪ್ರಜಾಭಿಪ್ರಾಯ ರೂಪಿತವಾಗಿರುವ ವಿಚಾರ ತಮಗೂ ಗೊತ್ತಿದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ಪುಷ್ಟೀಕರಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಇದನ್ನು ಶ್ರೀಮಾನ್ ವೀರಣ್ಣಗೌಡರು ವಿರೋಧಿಸಿದುದು ನನಗೆ ಅರ್ಥವಾಗಲಿಲ್ಲ. ಅವರು ಹೇಳಿರುವುದನ್ನು ಅರ್ಥ ಮಾಡಬೇಕಾಗಿಲ್ಲ. ಕಂಟ್ರೋಲ್ ಆಜ್ಞೆಗಳು ಇರಬಾರದು. ದೊಡ್ಡದೊಡ್ಡ ಪಟ್ಟಣಗಳ ವಿಚಾರದಲ್ಲಿ ಸರ್ಕಾರದವರು ವ್ಯಾಮೋಹಿತರಾಗಿದ್ದರೆ, ಅವರಿಗೆ ದವಸವನ್ನು ಕೊಡಬೇಕೆಂದಿದ್ದರೆ, ಹೊರಗಿನಿಂದ ಕೊಂಡು ತಂದು ಕೊಂಡ ಬೆಲೆಗೇ ಒದಗಿಸಲಿ. ಅಷ್ಟೇ ವಿನಾ ಅವರಿಗಾಗಿ ಪ್ರೊಕ್ಯೂರ್ ಮಾಡಿ ತಂದುಕೊಡಿ ಎಂದು ಯಾರೂ ಹೇಳಿಲ್ಲ. ಹತೋಟಿಯನ್ನು ದೇಶಾದ್ಯಂತ ರದ್ದುಮಾಡಿ, ಒಂದು ವೇಳೆ ಸ್ವಲ್ಪ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯವಿದ್ದರೆ open market ನಲ್ಲಿ ಕೊಂಡು ಅದಕ್ಕೆ ಏನು ಖರ್ಚು ಬೀಳುತ್ತದೆಯೋ ಅದನ್ನು ಕೊಳ್ಳುವವರ ತಲೆಯ ಮೇಲೆ ಹಾಕಿ ಅವರಿಗೆ ಪಡಿತರದ ಮೂಲಕ ಕೊಡಿ.

ಶ್ರೀ ಎ. ಭೀಮಪ್ಪನಾಯಕರು.—ಅದರ ಅರ್ಥವನ್ನು ಸೂಚಕರು ಹೇಳಬೇಕೋ ಅಥವಾ ಇವರೇ ಹೇಳುತ್ತಾರೆಯೋ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅವರ ಅರ್ಥ ಬರವಣಿಗೆಯಲ್ಲೇ ಇದೆ. ಚೆನ್ನಾಗಿ ಓದಿ ಪರಿಶೀಲನೆ ಮಾಡಿದರೆ ತಮಗೇ ಗೊತ್ತಾಗುತ್ತದೆ. ಇದೇ ಅವರ ಅರ್ಥ. ಅದು ಬಿಟ್ಟು ಪಟ್ಟಣದವರಿಗೆಲ್ಲಾ ಪಡಿತರ ಗೊತ್ತುಮಾಡಿ ಕಂಟ್ರೋಲ್ ದರದಲ್ಲಿ ಕೊಡಿ ಎಂದೂ ಹೇಳಿಲ್ಲ, ದೇಶದಲ್ಲಿ ಆಹಾರ ನೀತಿ ಬದಲಾವಣೆಯಾಗಲೇ ಬೇಕು. ಎಲ್ಲಿಯವರೆಗೆ ಕಂಟ್ರೋಲ್ ಆಜ್ಞೆಗಳನ್ನು ಹೀಗೆಯೇ ಇಟ್ಟುಕೊಂಡು ಹೋಗುವುದು? 1943ನೆಯ ಇಸವಿಯಲ್ಲಿ ಯುದ್ಧವಿದ್ದ ಕಾಲದಲ್ಲಿ ಇವನ್ನು ತಂದು ಯುದ್ಧ ಮುಗಿದ ಮೇಲೆ ಗೊಂದಲಕ್ಕೆ ಸಿಕ್ಕಿಹಾಕಿಕೊಂಡು ಈ ಹತೋಟಿ ಆಜ್ಞೆಗಳನ್ನು ಎಲ್ಲಿಯವರೆಗೆ ಇಟ್ಟುಕೊಂಡು ಹೋಗಬೇಕೆಂದು ಮಾಡಿದ್ದೀರಿ? ಒಂದು ನಿರ್ದಿಷ್ಟ ಕಾಲದಲ್ಲಿ, ಒಂದು ನಿಶ್ಚಿತ ಕಾಲದಲ್ಲಿ ಇದು ರದ್ದಾಗಲೇ ಬೇಕು. ಇದು ಯಾವತ್ತು ಎಂದು ಹೇಳದೆ ದಿನಕ್ರಮೇಣ ಇದನ್ನು ಯಾರೂ ವಿರೋಧಮಾಡುವವರಿಲ್ಲ, ಹಳ್ಳಿಯವರೆಲ್ಲಾ ಮೂಕ ಪ್ರಾಣಿಗಳು, ಎಷ್ಟು ಕಿರುಕುಳಕೊಟ್ಟರೂ ಅನುಭವಿಸಿಕೊಂಡು ಹೋಗುತ್ತಿದ್ದಾರೆಂಬ ಭಾವನೆಯಿಂದ ಈ ಕಂಟ್ರೋಲ್ ಆಜ್ಞೆಗಳಿಂದಲೇ ತಳ್ಳಿಕೊಂಡು ಹೋಗುತ್ತಿದ್ದರೆ ಕೊನೆಗೆ ಕ್ರಾಂತಿಯಾಗುತ್ತದೆ, ಕ್ರಾಂತಿಯಾಗಲಿ, ಆಗ ನೀವು ಬುದ್ಧಿ ಕಲಿತುಕೊಳ್ಳುತ್ತೀರಿ. ಈಗ ಅನೇಕ ವರ್ಷಗಳ ಹಿಂದೆಯೇ ನಾವು ಹೇಳಿದ್ದೆವು; ಆಹಾರ ಪದಾರ್ಥಗಳನ್ನು ಇದೇ ರೀತಿ ಸಬ್ಸಿಡೈಸ್ ಮಾಡುತ್ತಿದ್ದರೆ ದೇಶವು ಅಧೋಗತಿಗೆ ಹೋಗುತ್ತದೆ ಎಂದು. ಅವತ್ತು ನಿಮಗೆ ಎಚ್ಚರಿಕೆ ಬರಲಿಲ್ಲ. ಯಾವಾಗ ಕಮ್ಮಿ ಆಯಿತೋ ಆಗ Service at cost ಪದ್ಧತಿಯನ್ನು ಅನುಸರಿಸುವುದಕ್ಕೆ ಹೊರಟಿರಿ. ಅದೇ ರೀತಿ ಕಂಟ್ರೋಲ್ ಆಜ್ಞೆಗಳಿಂದ ಆಗತಕ್ಕ ಅನಾಹುತ ಅತ್ಯಧಿಕವಾಗಿ ಕ್ರಾಂತಿ ರೂಪವಾಗಿ ಬಂದಾಗ ಮಾತ್ರವೇ ನೀವು ಎಚ್ಚರಗೊಳ್ಳುತ್ತೀರಿ ಎಂದು ನಾನಿಂದು ಭವಿಷ್ಯ ಹೇಳುತ್ತೇನೆ. ಕಂಟ್ರೋಲ್ ಆಜ್ಞೆಗಳನ್ನು ಇರಿಸಿಕೊಂಡಿರುತ್ತೇವೆ, ದೇಶದಲ್ಲಿ ಅನೇಕರು ಇದನ್ನೇ ಕೇಳುತ್ತಿದ್ದಾರೆಂದು ನೀವು ಭಾವಿಸುವುದಾದರೆ ಅದಕ್ಕೂ ಇಂದು ವೋಟು ತೆಗೆದುಕೊಳ್ಳಿ; ನಿಮಗೆ ವೋಟು ಬರುತ್ತದೆಯೋ ನೋಡೋಣ! ಖಂಡಿತ ನಿಮಗೆ ವೋಟು ಬರುವುದಿಲ್ಲವೆಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯವೆಂಬುದು ಆಡಳಿತವನ್ನು ಹತೋಟಿಯಲ್ಲಿಡುವ ಒಂದು ಮಹಾಶಕ್ತಿ. ಪ್ರಜಾಭಿಪ್ರಾಯ ಯಾವ ರೀತಿಯಿದೆಯೋ ಆ ರೀತಿ ತಾವು ಖಂಡಿತವಾಗಿ ಮಾಡಬೇಕು. ಆದ್ದ

ರಿಂದ ನೀವೀಗ ಕಂಟ್ರೋಲ್‌ಗಳನ್ನು ಇಟ್ಟುಕೊಳ್ಳಬೇಕೆಂದರೆ ಜನರಿಂದ ವೋಟು ತೆಗೆದುಕೊಂಡು ಅವರ ಅಭಿಪ್ರಾಯ ತೆಗೆದುಕೊಂಡು ಅದರಂತೆ ಮಾಡಿ.

ಎರಡನೆಯದಾಗಿ, ಇದರಲ್ಲಿ ಒಂದು ತತ್ವವಿದೆ. Discrimination between man and man ಅಂದರೆ ಮನುಷ್ಯ ಮನುಷ್ಯನಿಗೆ ಸರ್ಕಾರ ವ್ಯತ್ಯಾಸ ಮಾಡುವುದು ತಪ್ಪು. ಒಂದು ಕಡೆ ಪಟ್ಟಣಗಳಲ್ಲಿರುವ ಜನಗಳಿಗೆ ರೇಷನಿಂಗ್ ವ್ಯವಸ್ಥೆ ಕೊಟ್ಟು ರಕ್ಷಣೆ ಕೊಡುವುದು, ಇನ್ನೊಂದುಕಡೆ informal rationing ಎಂದು ಹೇಳಿ ಅಹಾರದ ಜವಾಬ್ದಾರಿಯನ್ನು ಅವರೇ ಹೊತ್ತುಕೊಳ್ಳಲಿ, ಹೇಗೋ ಮಾಡಿಕೊಳ್ಳುತ್ತಾರೆಂದು ಬಿಟ್ಟುಬಿಡುವುದು ನ್ಯಾಯವಲ್ಲ. ತಾವು ಎಲ್ಲರಿಗೂ ಪ್ರತಿಯೊಬ್ಬ ಮನುಷ್ಯನಿಗೂ ಒಂದೇ treatment ಕೊಡುತ್ತೇವೆಂದು ಹೇಳಿ,—ನಾವು ಬೆಳೆದದ್ದನ್ನೆಲ್ಲಾ ಸರ್ಕಾರದವರಿಗೆ ಕೊಟ್ಟು ಬಿಡುತ್ತೇವೆ. ಆಗ್ಗೆ ಪ್ರತಿಯೊಬ್ಬ ಮನುಷ್ಯನಿಗೂ ಒಂದೇ ಸಮನಾದ ಅವಕಾಶವನ್ನು ಏರ್ಪಡಿಸಿಕೊಟ್ಟ ಹಾಗಾಯಿತು.—ಅದು ಬಿಟ್ಟು ಯಾರು ಜೋರಾಗಿ ಮಾತನಾಡುತ್ತಾರೊ, ಯಾರು ಹೆಚ್ಚಿಗೆ ಗಲಾಟೆ ಮಾಡುತ್ತಾರೋ ಅವರಿಗೆ ರಕ್ಷಣೆ ಕೊಡುವುದು ಇತರರನ್ನು ಪರಮಾತ್ಮನ ಕೃಪೆಗೇ ಬಿಡುವುದು—ಇಂಥಾ ಅನ್ಯಾಯ ದೇಶದಲ್ಲಿ ಇರಕೂಡದು. ಈಗ ಯಾರಿಗೆ ಪ್ರೋತ್ಸಾಹ ಕೊಡುತ್ತಿದ್ದೀರಿ! ಸಣ್ಣ ಪುಟ್ಟ ರೈತರಿಂದ ಬಲಾತ್ಕಾರದಿಂದ ಕಿತ್ತುಕೊಳ್ಳುತ್ತೀರಿ. ಉಳಿದವರು, ಯಾರು ನೂರು ಇನ್ನೂರು ಪಲ್ಲಗಳನ್ನು ಬೆಳೆಯುತ್ತಾರೋ, ಯಾರು ಲಂಚಾಕೊಟ್ಟು ದವಸಗಳನ್ನು ಉಳಿಸಿಕೊಂಡು ದವಸವನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೋ ಅಂಥವರಿಗೆ ತಾವು ಪ್ರೋತ್ಸಾಹ ಕೊಡುವ ನೀತಿ ಇನ್ನುಬೇಡ, ಮಾನ್ಯ ಮಂತ್ರಿಗಳೇ ವಿರೋಧಪಕ್ಷದಲ್ಲಿ ಹಿಂದೆ ಇದ್ದಾಗ [ಅವರ ಭಾಷಣದ ಪ್ರತಿ ಇಲ್ಲದಿದ್ದರೆ ಅದನ್ನೇ ಓದುತ್ತಿದ್ದೆ] ಆಗ್ಗೆ ನಾವೀಗ ಹೇಳುತ್ತಿರತಕ್ಕ ಮಾತನ್ನೇ ನನಗಿಂತಲೂ ತೀವ್ರವಾಗಿ ಹೇಳುತ್ತಿದ್ದುದನ್ನು ನಾನು ಬಲ್ಲೆ. ಅಂಥವರು ಇಂದು ಆ ಸ್ಥಾನದಲ್ಲಿ ಕುಳಿತುಕೊಂಡು ಅದೇ ನೀತಿಯನ್ನು ಪರಿಪಾಲಿಸಿಕೊಂಡು ಬರುತ್ತಿರುವುದು ಬಹಳ ವಿಷಾದಕರವಾಗಿದೆ.

ಅಧ್ಯಕ್ಷರು.—ನೀವೇನಾದರೂ ಆ ಸ್ಥಾನಕ್ಕೆ ಬಂದರೆ ಆಗುತ್ತದೆಯೋ ಏನೋ!!

(ನಗು)

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅದನ್ನು ಪರೀಕ್ಷೆಮಾಡಿ ನೋಡಬೇಕು! ಈ ನೀತಿ ಸರಿಯಾಗಿದ್ದರೆ ಒಪ್ಪಿಕೊಳ್ಳೋಣ. ನೀವು ಈಗ ಸರಿಯಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳಬಲ್ಲಿರಾ? ಈಗೇನಾದರೂ ಬ್ಲಾಕ್‌ಮಾರ್ಕೆಟ್ ತಪ್ಪಿಸಿದ್ದೀರಾ? ಅದು ನಿಮಗೆ ಸಾಧ್ಯವಾಗಿಲ್ಲ. ಬ್ಲಾಕ್‌ಮಾರ್ಕೆಟ್ ದಿನವೂ ನಡೆಯುತ್ತಿದೆಯೆಂದು ಸರ್ಕಾರದವರು ಒಪ್ಪುತ್ತಾರೆ. ಬ್ಲಾಕ್‌ಮಾರ್ಕೆಟ್ ಇಲ್ಲದಿದ್ದರೆ ಜನ ಸತ್ತುಹೋಗುತ್ತಾರೆಂದು ಸರ್ಕಾರದವರೇ ಅಭಿಪ್ರಾಯಪಟ್ಟಿದ್ದಾರೆ. ಲಂಚ ರುಷುವತ್ತುಗಳಿಂದ ಅನ್ಯಾಯಗಳಾಗುತ್ತಿವೆಯೆಂದು ಸರ್ಕಾರದವರೂ ಒಪ್ಪುತ್ತಾರೆ. It is a question of fact. You cannot deny it. You please get up and say to this House that there is no black-Market in this country, I agree; you please tell this House that there is no corruption, I agree. ಆ ರೀತಿಯಾಗಿ ಹೇಳುವುದಕ್ಕೆ ನಿಮಗೆ ಧೈರ್ಯವಿಲ್ಲ! ಆದ್ದರಿಂದ ಕಂಟ್ರೋಲ್ ಆಜ್ಞೆಗಳು ಯಾವತ್ತಾದರೂ ನಿಶ್ಚಿತವಾದ ದಿವಸ ರದ್ದಾಗಲೇಬೇಕು. ಅದನ್ನು ಸರ್ಕಾರದವರೇ ನಿರ್ಧಾರಮಾಡಿ ಜನರಿಗೆ ಹೇಳಬೇಕು. ಈ ಅನೀತಿಯುತ ನೀತಿಯನ್ನು ಕೊನೆಗಾಣಿಸುತ್ತೇವೆಂದು ಧೈರ್ಯವಾಗಿ ಹೇಳಿ. ಅವತ್ತಿನ ದಿವಸ ಈ ಕಂಟ್ರೋಲ್ ಆಜ್ಞೆಗಳನ್ನು ರದ್ದುಮಾಡಬೇಕಾದರೆ ಆಗ ಯಾವ ಪರಿಸ್ಥಿತಿಯುಂಟಾಗುತ್ತದೆಂಬುದನ್ನು ಆಲೋಚನೆಮಾಡಿ ಆ ಪರಿಸ್ಥಿತಿಯನ್ನು ಹತೋಟಿಯಲ್ಲಿಡುವುದಕ್ಕೆ ಇವತ್ತಿನಿಂದಲೇ ಕಾರ್ಯಕ್ರಮ ತೆಗೆದುಕೊಳ್ಳಿ, ಆ ರೀತಿಯಾಗಿ ಈ ನಿರ್ಣಯದಲ್ಲಿ ಸೂಚಿಸಿದ್ದಾರೆಂದು ನಾನು ಭಾವಿಸುತ್ತೇನೆ. ಅದು ಬಿಟ್ಟು ಕೇಂದ್ರದವರು ಹೇಳಿದ್ದಾರೆ, ಪಂಡಿತ್ ನೆಹರೂರವರು ಹೇಳಿದ್ದಾರೆ ಎಂದು ಹೇಳಿ ಅದನ್ನೇ ಅನುಸರಿಸಿಕೊಂಡು ಹೋಗುವುದರಿಂದ ದೇಶಕ್ಕೆ ಕ್ಷೇಮವಾಗುವುದಿಲ್ಲ, ನಾಳೆಯ ದಿವಸ ಪಂಡಿತ ನೆಹರೂರವರೇ ಆಗಲೀ, ಪ್ರಜಾಭಿಪ್ರಾಯ ಬೇರೆ ರೀತಿಯಾಗಿ ಇದೆಯೆಂದು ಗೊತ್ತಾದರೆ,

He will be the first man to say 'Let there be no control when people do not like it.' But to-day people round about him want control, people who are able to influence his opinion, want control; similarly people who are capable of wielding influence over you, want control. (A Voice: Nehru does not want control)

The Hon'ble Sri H. C. DASAPPA.—I want to say one thing. I do not mind Sri Channabasappa's enthusiasm. If he is not enthusiastic he is nothing else. What I say is let us not drag in the names of big personalities and comment on their character when they are not here to defend themselves! not that our Prime Minister is unable to defend himself. It is not fair that we should comment that he is influenced by people round, that the advisers round him are not the right sort of advisers and all that. It is unnecessary.

Sri B. HUTCHE GOWDA.—This policy is laid down by the Central Government.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹೇಳುವುದಿಷ್ಟೆ. ಪ್ರಜಾಭಿಪ್ರಾಯ ಯಾವ ರೀತಿಯಿದೆಯೋ ಆ ರೀತಿ ನಡೆದುಕೊಳ್ಳಬೇಕೆಂದು ಹೇಳತಕ್ಕ ಮಹಾ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಆದ್ದರಿಂದ ಪ್ರಜಾಭಿಪ್ರಾಯ ಈ ರೀತಿಯಾಗಿದೆಯೆಂದು ತಿಳಿಸುವುದಕ್ಕೆ ಈ ಸಭೆಯವರು ಖಚಿತವಾಗಿ ತಮ್ಮ ಅಭಿಪ್ರಾಯವನ್ನು ಸಾರಿ ಅವರಿಗೆ ತಿಳಿಯಪಡಿಸುವುದು ನಮ್ಮ ಕರ್ತವ್ಯ. ಈ ಸಭೆಯ ಅಭಿಪ್ರಾಯ ಏನಿದೆಯೆಂದು ಅವರ ತಿಳಿವಳಿಕೆಗೆ ಬಂದರೆ ಆಗ್ಗೆ ಅವರೇ ಹೇಳುತ್ತಾರೆ.

ಆದ್ದರಿಂದ ಈ ಕಂಟ್ರೋಲ್ ಆಜ್ಞೆಗಳು ಯಾವತ್ತಾದರೂ ಒಂದು ದಿವಸ ರದ್ದು ಆಗಲೇ ಬೇಕು. ಧೈರ್ಯವಿದ್ದರೆ ಈ intermediary stage ಕೂಡ ಬೇಡ. ಇಲ್ಲದಿದ್ದರೆ stage by stage ಮಾಡಬೇಕೆಂಬ ಒಂದು ನೀತಿಯನ್ನು ಅನುಸರಿಸಬೇಕೆಂಬ ಪಕ್ಷಕ್ಕೆ ಶ್ರೀಮಾನ್ ಮಂಜಪ್ಪನವರು ಹೇಳಿದ ನೀತಿಯನ್ನು ಅನುಸರಿಸಿ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಕೊಂಡು ಬನ್ನಿ. ಒಂದು ವರ್ಷ ಅವಕಾಶಕೊಟ್ಟು ಇದಕ್ಕೊಂದು ತಾರೀಖನ್ನು ಗೊತ್ತುಮಾಡಿ ಅವತ್ತಿನ ದಿವಸ ಈ 3—4 ಪಟ್ಟಣಗಳಿಗೆ ಹೊರಗಡೆಯಿಂದ open market ನಲ್ಲಿ ಕೊಂಡು ತಂದು ಸರಬರಾಯಿ ಮಾಡಿ. ಶ್ರೀಮಾನ್ ವೀರಣ್ಣಗೌಡರು ಇದರ ಅರ್ಥ ಸರಿಯಾಗಿ ಹೇಳಲಿಲ್ಲವೆಂದು ಕಾಣುತ್ತದೆ. ಹಳ್ಳಿಗಾಡಿನಿಂದ ಶೇಖರಣೆ ಮಾಡಿಕೊಂಡು ಬಂದು ವಿಶೇಷ ರೀತಿಯಲ್ಲಿ ಇವರಿಗೆ ಕೊಡಿ ಎಂದು ಅವರು ಹೇಳಿದರು. ಈ ನಿರ್ಣಯದ ಅರ್ಥ ಅದಲ್ಲ. ಹಾಗಿದ್ದರೆ ಈಗ ಇವರು ಮಾಡುತ್ತಿರುವುದೇ ಆಯಿತು.

ಸರ್ಕಾರದವರು ಈ ನೀತಿಯನ್ನು ಒಪ್ಪಿಕೊಳ್ಳತಕ್ಕ ಪಕ್ಷದಲ್ಲಿ ತಾವೇಕೆ ಇಂದೇ ಒಂದು ಘೋಷಣೆಯನ್ನು ಹೊರಡಿಸಬಾರದು? ಮುಂದಿನ ವರ್ಷದಿಂದ ನಾವು ಈ ಹತೋಟಿ ಆಜ್ಞೆಗಳನ್ನೆಲ್ಲಾ ತೆಗೆಯುತ್ತೇವೆ. ನಾವು ಇಂತಿಂಥಾ ನಿರ್ದಿಷ್ಟವಾದ ಪ್ರದೇಶದಲ್ಲಿರತಕ್ಕ ಜನರಿಗೆ ಮಾತ್ರ open marketನಲ್ಲಿ ಕೊಂಡು ತಂದು ಕೊಡುತ್ತೇವೆ ಎಂದು ಹೇಳಿ.

Sri K. PUTTASWAMY.—Academic interest.

Sri H. M. CHANNABASAPPA:—No academic interest, Sri Kadidal Manjappa means business.

Sri B. HUTCHE GOWDA.—But the elections come in the month of December.

Sri A. BHEEMAPPA NAIK,—Sri B. Hutche Gowda is one of the candidates who will make use of it.

ಶ್ರೀ ಎಚ್. ಎಂ. ಚನ್ನಬಸಪ್ಪನವರು.— ಸರ್ಕಾರದವರು ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸತಕ್ಕದ್ದು ಯುಕ್ತವಾದುದೆಂದು ನಾನು ಹೇಳುತ್ತೇನೆ. ಇಲ್ಲಿಯತನಕ ಆದದ್ದು ಆಗಿಹೋಯಿತು. ಇನ್ನಾದರೂ ಯಾವುದು ಒಳ್ಳೆಯದೋ ಅದನ್ನು ಸ್ವೀಕರಿಸಿ ಯಾವುದು ಕೆಟ್ಟದ್ದೋ ಅದನ್ನು ಬಿಟ್ಟು ಬಿಟ್ಟು, ಇನ್ನು ಮುಂದಕ್ಕಾದರೂ ಬುದ್ಧಿವಂತರಾಗಿ, ಜನರ ಅಭಿಪ್ರಾಯವೇನಿದೆಯೆಂಬುದನ್ನು ತಿಳಿದು ಅದಕ್ಕನುಸಾರವಾಗಿ ನಿಮ್ಮ ನೀತಿಯನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ವಿನಯದಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ. ತಾವು ಹಿಂದೆ ಇದೇ ವಿಚಾರಗಳಲ್ಲಿ ಹೇಗೆ ಹೇಗೆ ಇದೇ ಸಭೆಯಲ್ಲಿ ವಾದಗಳನ್ನು ಮಾಡುತ್ತಿದ್ದಿರೆಂಬುದನ್ನು ಇಂದು ತಾವೇ ಜ್ಞಾಪಕಕ್ಕೆ ತೆಗೆದುಕೊಳ್ಳಿ. ಆದರೆ ನಾನು ಶ್ರೀಮಾನ್ ಗುಂಡಪ್ಪಗೌಡರು ಮಂತ್ರಿಗಳಾಗಿದ್ದಾಗ ಒಂದು ರೀತಿ ಹೇಳುವಂತೆ ನಾನು ಹೇಳುವುದಿಲ್ಲ. ಈ ಹತೋಟಿ ಆಜ್ಞೆಗಳು ದೇಶದಲ್ಲಿರುವತನಕ ಎಲ್ಲಿ ನೋಡಿದರೂ ಬ್ಲಾಕ್ ಮಾರ್ಕೆಟ್, ಲಂಚಕೋರತನ, ನೀತಿ ಬಾಹಿರ ಕೆಲಸಗಳು ಇತ್ಯಾದಿಗಳು ಹೆಚ್ಚಾಗುತ್ತಿರುವುದರಿಂದ ದೇಶದಲ್ಲಿ ಯಾರಿಗೂ ಸುಖವಿಲ್ಲ, ಕೊಳ್ಳತಕ್ಕವನಿಗೂ ಸುಖವಿಲ್ಲ. ಕೊಡತಕ್ಕವನಿಗೂ ಸುಖವಿಲ್ಲ, ಸರ್ಕಾರದವರಿಗೆ ಮೊಟ್ಟಮೊದಲೇ ಇಲ್ಲ ಆ ಸುಖ.

ಅಧ್ಯಕ್ಷರು.—ಆಹಾರದ ಬೆಲೆಯನ್ನು ನಿಗದಿ ಮಾಡತಕ್ಕ ವಿಚಾರದಲ್ಲಿ, ಈ ವಿಚಾರಗಳೆಲ್ಲಾ ಏಕೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.— ಇದರಿಂದ ದೇಶದಲ್ಲಿ ಅನ್ಯಾಯಗಳು ಹೇಗೆ ಹೇಗೆ ನಡೆಯುತ್ತಿವೆಂಬುದನ್ನು ಮತ್ತು ಅದರಿಂದುಂಟಾಗಬಹುದಾದ ಅನರ್ಥಗಳೇನೆಂಬುದನ್ನು ತಮ್ಮ ಗಮನಕ್ಕೆ ತರತಕ್ಕ ಬಗ್ಗೆ ಈ ನಿದರ್ಶನಗಳನ್ನೆಲ್ಲಾ ನಾನು ತಿಳಿಸಬೇಕಾಗಿ ಬಂತು. ಕಾಲಮಹಿಮೆಯನ್ನು ತಾವು ತಿಳಿದು ನಡೆಯತಕ್ಕದ್ದು ಮುಖ್ಯ. ಆದುದರಿಂದ ಈ ನಿರ್ಣಯಕ್ಕೆ ನನ್ನ ಒಪ್ಪಿಗೆಯನ್ನಿತ್ತು ತಾವು ಕೂಡಲೇ ಈ ಹತೋಟಿ ಆಜ್ಞೆಗಳನ್ನೆಲ್ಲಾ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರನೇಕರು ಈ ನಿರ್ಣಯದ ಮೇಲೆ ಇನ್ನೂ ಮಾತನಾಡಬೇಕೆಂಬ ಸೂಚನೆ ಕಂಡು ಬರುವುದರಿಂದ ಇದರ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರಿಸಲಾಗಿದೆ.

The House will now rise for the day and meet to-morrow at Eight of the Clock.

The Assembly adjourned at Five Minutes past Six of the Clock to meet again at Eight of the Clock on Tuesday, 3rd April 1951.

WD 3189—GPB—500—2-6-51

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಸ್ವಾಮಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಆದರೂ ಭರವಸೆಯನ್ನು ಇನ್ನೂ ಸ್ಪಷ್ಟವಾಗಿ, ಅದೆಷ್ಟು ಬೇಗ ಈ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದ್ದರೆ ಚೆನ್ನಾಗಿತ್ತು. ಎಲ್ಲ ಮಾನ್ಯ ಸದಸ್ಯರ ಮನಸ್ಸೂ, ಜನರ ಮನಸ್ಸೂ ಇದರ ಪರವಾಗಿರುವುದರಿಂದ ಕನ್ನಡದ ಮೂಲಕವೇ ಕನ್ನಡ ಮಕ್ಕಳಿಗೆ ಜ್ಞಾನದಾನವಾಗುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು. ಸರ್ಕಾರದವರಿತ್ತಿರುವ ಭರವಸೆಯ ಮೇಲೆ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave of the House withdrawn.

Mr. SPEAKER.—Next Resolution, Sri S. Rangaramaiah.

RESOLUTION No. 3.

Prohibition of sale of white oil

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ನನ್ನ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"ಸೋಲ್ ಏಜೆಂಟರುಗಳು ವರ್ತಕರುಗಳಿಗೆ 'ವೈಟ್ ಆಯಿಲ್' ಎಂಬ ಎಣ್ಣೆಯನ್ನು ಯಾವ ಹೆಸರಿನಿಂದಲೇ ಆಗಲಿ ಮಾರಾಟ ಮಾಡುವ ವಿಷಯದಲ್ಲಿ ವಿಶೇಷ ರೀತಿಯ ಲೈಸೆನ್ಸು ಇದ್ದ ಹೊರತು, ಅದನ್ನು ಮಾರಾಟ ಮಾಡದಂತೆ ನಿರೋಧಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ಈ ಠರಾವನ್ನು ತಂದಿರತಕ್ಕ ಉದ್ದೇಶವಾದರೂ ಇಷ್ಟೆ; ವೈಟ್ ಆಯಿಲ್ ಎಂದು ಹೇಳುವ ಪದಾರ್ಥವನ್ನು ಹೊಸದಾಗಿ ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆ, ಆದಕಾರಣ ಇದು ಎಲ್ಲರಿಗೂ ದೊರೆಯದೇಯಿರುವ ಹಾಗೆ ನಿರೋಧ ಮಾಡಬೇಕು. ಇದನ್ನು ಖನಿಜ ಅಥವ ಗಣಿಗಳಿಂದ ತೆಗೆಯುತ್ತಾರೆಯೇ ಹೊರತು ಎಣ್ಣೆ ಬೀಜದಿಂದಲ್ಲ, ನನಗೆ ತಿಳಿದಮಟ್ಟಿಗೆ, ಇದು ಸೀಮೆ ಎಣ್ಣೆಯ ವಂಶದಲ್ಲಿ ಉತ್ಪತ್ತಿಯಾಗುತ್ತದೆ, ಇದು ಅದರ ತಮ್ಮ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಖನಿಜದಿಂದ ತೆಗೆಯಬೇಕಾದರೆ, ಮೊದಲು ಸೀಮೆಎಣ್ಣೆ ಬರುತ್ತದೆ, ಆಮೇಲೆ ಬೇರೆ ಕ್ರಮವನ್ನು ಪ್ರಯೋಗಿಸಿ ಈ ವೈಟ್ಆಯಿಲ್ ತೆಗೆಯುತ್ತಾರೆ. ಇದರ ಸ್ವಭಾವ ಮತ್ತು ರೂಪ ನೀರಿನ ಹಾಗಿದೆ. ಇದಕ್ಕೆ ವಾಸನೆ ಇಲ್ಲ, ರುಚಿ ಇಲ್ಲ, ಬಣ್ಣವಿಲ್ಲ. ಇದನ್ನು ಬರ್ಮಾ ಷೆಲ್ ಕಂಪೆನಿಯವರು ಆಮದು ಮಾಡುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಇದು white kerosine oil ಎಂದು ತಿಳಿದುಕೊಳ್ಳೋಣವೆ ?

ಶ್ರೀ ಎಸ್. ರಂಗರಾಮಯ್ಯನವರು.—ಇದೂ ಒಂದು mineral oil. ಇದು ಯಾವ ಬಣ್ಣವನ್ನಾದರೂ, ಮತ್ತು ಯಾವ ವಾಸನೆಯನ್ನಾದರೂ ತೆಗೆದುಕೊಳ್ಳುತ್ತದೆ. ಇದನ್ನು ಯಾವ ಪದಾರ್ಥಕ್ಕೆ ಸೇರಿಸಿದರೂ ಸುಲಭವಾಗಿ ಪತ್ತೆಮಾಡುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಹೊಸ ನಾಗರೀಕತೆ ಹೆಚ್ಚುತ್ತಾ ಬಂದು ಈಚೆಗೆ ಈ ಎಣ್ಣೆಯನ್ನು ಅಲ್ಪಸ್ವಲ್ಪ ಪ್ರಮಾಣದಲ್ಲಿ ಹೇರ್ಆಯಿಲ್‌ಗಳನ್ನು ತಯಾರಿಸಲು ಅಂದರೆ ಕೇಶರಂಜನಿ ಎಣ್ಣೆ (ಮುಂತಾದುವುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದಾರೆಂದು ಕೇಳಿದ್ದೇನೆ. ಈಚೆಗೆ ಬೇರೆ ಕೆಲಸಗಳಿಗೂ ಉಪಯೋಗಿಸಲು ಪ್ರಾರಂಭವಾಗಿದೆ. ಈಗ ಬಹಳ ಭೀತಿಗೆ ಕಾರಣವಾಗಿರುವ ವಿಷಯವೇನೆಂದರೆ, ಈ ಎಣ್ಣೆಯನ್ನು ಒಳ್ಳೆಣ್ಣೆಗೂ ಬೆರಸಿ ಇದರಿಂದ ಹೋಟಲುಗಳಲ್ಲಿ ಅನೇಕ ತಿಂಡಿ ಪದಾರ್ಥಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಇದನ್ನು ವನಸ್ಪತಿ ಕಂಪೆನಿಯವರು ತರಿಸಿಕೊಂಡು dehydrogenate ಮಾಡಿ ಬೆರಸುತ್ತಿದ್ದಾರೆ. ಈಗ ಬರತಕ್ಕ ವನಸ್ಪತಿಗಳಲ್ಲಿ ಸುಮಾರು ಸೇಕಡ 60–70 ರಷ್ಟು ಈ ವೈಟ್ ಆಯಿಲ್ ಇರುತ್ತದೆಂದು ತಿಳಿದುಬಂದಿದೆ. ಇದು ತಪ್ಪು, ಹಾಗಿಲ್ಲ, ಎಂದು ತಿಳಿದವರು ಹೇಳಿದರೆ ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಅಂತೂ ಇದರಲ್ಲಿ ಸೇರಿರುತ್ತದೆ. ಘನೀಭೂತವಾದ ವನಸ್ಪತಿಯನ್ನು ತೆಗೆದುಕೊಂಡು ಬಂದು ಬೆಣ್ಣೆಯಲ್ಲಿ ಸೇರಿಸಿ ಬೆಣ್ಣೆಯನ್ನು ಮಾರಾಟ ಮಾಡುತ್ತಿದ್ದಾರೆ. ಬೆಣ್ಣೆಗೆ ಕೊಬ್ಬು ಸೇರಿಸಿದರೂ ಚಿಂತೆಯಿಲ್ಲ, ಇದನ್ನು ಸೇರಿಸಿದರೆ ಎಷ್ಟು ಅಪಾಯಕರ ಎಂಬುದನ್ನು ಯೋಚಿಸಬೇಕು, ಇದರಲ್ಲಿ ಎ. ಬಿ. ಸಿ. ಡಿ. ಯಾವ ವಿಟಮಿನ್‌ಗಳೂ ಇಲ್ಲ. ಆರೋಗ್ಯಕ್ಕೆ ಒಳ್ಳೆಯದಲ್ಲ, ಹೀಗಿದ್ದರೂ ಇದನ್ನು ಸೇರಿಸಿ ಮಾರುತ್ತಿದ್ದಾರೆ. ಇದು ಬಹಳ ಭಯಾನಕವಾದುದು, ಇದರಿಂದ ಗಾಬರಿಯಾಗಿದೆ. ಈಗ ನೀರುಮಜ್ಜಿಗೆ, ನೀರುಹಾಲು, ಬೆರಕೆ ಬೆಣ್ಣೆ, ಕಲ್ಲು ಮಣ್ಣು ಬೆರಸಿದ ಅಕ್ಕಿ ರಾಗಿ, ಇವುಗಳನ್ನು ಸೇವಿಸಿ ನಾವು ಜೀವಿಸಬೇಕಾಗಿದೆ. ಹೀಗಿರುವಾಗ ಸ್ವಾತಂತ್ರ್ಯ ಬಂದಮೇಲೆ ಧೀರೋದ್ಧಾತ ಸಿಪಾಯಿಗಳಾಗಿ ನಾವು ದೇಶವನ್ನು ಉದ್ಧಾರ ಮಾಡುವುದು ಹೇಗೆ ? ನಮ್ಮ ದೇಶವನ್ನು ಬೆಳೆಸುವುದು ಹೇಗೆ ? ಈ ಹೊತ್ತಿನ ಪ್ರಶ್ನೋತ್ತರ ಕಾಲದಲ್ಲಿ ವ್ಯಕ್ತಪಟ್ಟದ್ದನ್ನು ನೋಡಿದರೆ, 1941ನೆಯ ಇಸವಿಯಿಂದೀಚೆಗೆ 1951ರಲ್ಲಿ 18ಲಕ್ಷ ಜನ ಹೆಚ್ಚಿದ್ದಾರೆ. ಈ ಬೆರಕೆ ಪದಾರ್ಥಗಳನ್ನು ತಿನ್ನುತ್ತಿರುವುದೇ ಹೀಗೆ ಜನಸಂಖ್ಯೆ ಹೆಚ್ಚಲು ಕಾರಣವೆಂದು ಕೆಲವರು ಹೇಳುತ್ತಿದ್ದಾರೆ (ನಗು!) ಇದರಲ್ಲಿ ನನಗೇನೋ ಅಷ್ಟು ನಂಬಿಕೆ ಇಲ್ಲ. ನಾನೇನೋ ಗಟ್ಟಿಮುಟ್ಟಾಗಿದ್ದೇನೆ. ಹೀಗಿರುವಾಗ ಜನರ ಆರೋಗ್ಯ ರಕ್ಷಣೆ ಮಾಡುವುದು ಸರ್ಕಾರದ ಅತಿ ಮುಖ್ಯವಾದ ಕೆಲಸ. ಇದರ ಅನುಭವ, ಇದರ ದುಷ್ಪರಿಣಾಮ ನನಗೆ ಯಾವಾಗ ಬಂತೆಂದರೆ, ಇದನ್ನು ಕೊಬ್ಬರಿ ಎಣ್ಣೆಗೆ ಬೆರೆಸುತ್ತಾರೆಂಬುದುದು ಗೊತ್ತಾದಾಗ, ನಮ್ಮ ಮನೆಯ ಹೆಣ್ಣುಮಕ್ಕಳ ತಲೆಕೂದಲು ಉದುರುವುದಕ್ಕೆ ಪ್ರಾರಂಭವಾಯಿತು. ಒಂದು ಸಣ್ಣಮಗುವಿನ ತಲೆ ಕೂದಲು ಉದುರಿ ತಾಮ್ರದ ಚೊಂಬು ಇರುವ ಹಾಗಾಯಿತು, ಕಾಲೇಜಿನಲ್ಲಿ ಓದುವ ಹೆಣ್ಣುಮಕ್ಕಳು ಈ ಎಣ್ಣೆಯನ್ನು ಉಪಯೋಗಿಸಿದರೆ ಏನಾಗುತ್ತದೆಂದು ಯೋಚನೆ ಮಾಡಬೇಕು ಅವರು ನೋಡುವುದಕ್ಕೆ ಚೆನ್ನಾಗಿರುತ್ತಾರೆ, ಆದರೆ ತಲೆ ಮಾತ್ರ ಹೀಗಾದರೆ ಹೇಗೆ? ಈ ದುಷ್ಪರಿಣಾಮಗಳನ್ನೆಲ್ಲಾ ನೋಡಿ, ಈ ಠರಾವನ್ನು ಈ ಮಾನ್ಯ ಸಭೆಯ ಮುಂದೆ ತರಬೇಕೆಂದು ನನಗೆ ಅನಿಸಿತು, ಈ ವೈಟ್ ಆಯಿಲ್ ಎಂಬ ಎಣ್ಣೆಯನ್ನು ಕೊಬರಿ ಎಣ್ಣೆಗೆ ಬೆರಸಿದರೆ ಚಳಿಗಾಲದಲ್ಲಿಯೂ ಕೊಬರಿಎಣ್ಣೆ ಘಟ್ಟಿಗಾಗುವುದಿಲ್ಲ, ಅಲ್ಲದೆ ಸೀಮೆಎಣ್ಣೆ ನಾಲ್ಕುಗ್ಯಾಲನ್‌ಟಿನ್ ಒಂದಕ್ಕೆ 6 ರೂಪಾಯಿ ಆಗುತ್ತದೆ, ವೈಟ್ ಆಯಿಲ್ ಅದೇ ಪ್ರಮಾಣಕ್ಕೆ 24 ರೂಪಾಯಿ ಆಗುತ್ತದೆ.

ಆದರೆ ಕೊಬರಿ ಎಣ್ಣೆ ಇದಕ್ಕಿಂತ ವಿಪರೀತ ಹೆಚ್ಚು ಬೆಲೆ. ಇದನ್ನು ಕೊಬರಿ ಎಣ್ಣೆಗೆ ಬೆರಸಿದರೆ ಬಹಳ ಲಾಭದಾಯಕವಾಗಿರುತ್ತದೆ. ಆದುದರಿಂದ ವಿಶೇಷವಾಗಿ ಕೊಬರಿ ಎಣ್ಣೆಗೆ ಈ ವೈಟ್ ಆಯಿಲ್ಲನ್ನು ಬೆರಸುತ್ತಾರೆ.

ಇದನ್ನು 1¼ ಮಣ ಹಿಡಿಯುವ ಒಳ್ಳೆಣ್ಣೆಯ ಟಿನ್ನಿಗೆ ಹಾಕಿದರೂ ಲಾಭ ಬರುತ್ತದೆ. ಒಳ್ಳೆಣ್ಣೆಗೆ 40 ರೂಪಾಯಿ ಬೆಲೆ ಇದೆ. ಇದಕ್ಕೆ 24 ರೂಪಾಯಿ ಬೆಲೆ. ಹೀಗೆಯೇ ಕೈಯೆಣ್ಣೆಗೂ ಇದನ್ನು ಬೆರಸುತ್ತಾರೆಂದು ವದಂತಿ ಇದೆ. ಇದೆಲ್ಲಕ್ಕಿಂತ ಹೆಚ್ಚಾದ್ದು ವನಸ್ಪತಿಯನ್ನು ತೆಗೆದುಕೊಂಡು ಹೋಗಿ ಹೋಟಲಿನವರು ಬೆಣ್ಣೆಗೆ ಬೆರೆಸುತ್ತಿರುವುದು. ಹೋಟಲುಗಳಿಗೆ ಪದೇ ಪದೇ ಜನ ಹೋಗಿ ತಿಂಡಿ ತಿನ್ನುವುದರ ಜೊತೆಗೆ ಇಷ್ಟೊಂದು mineral oil ತಿಂದರೆ ಏನಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಆದ್ದರಿಂದ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗಿರುವ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವೈಟ್ ಆಯಿಲ್ ತರಿಸುವುದಕ್ಕೆ ಲೈಸೆನ್ಸ್ ಕೊಡುವಾಗ ಅವರು ಈ ಬಗ್ಗೆ ಲೈಸೆನ್ಸ್ ಕೇಳುವವರು ಯಾರು, ಎಂಥವರು ಏತಕ್ಕಾಗಿ ತರಿಸುತ್ತಾರೆ ಎಂಬುದನ್ನು ಯಾವುದನ್ನೂ ನೋಡದೆ ಕೊಡುತ್ತಿದ್ದಾರೆ ; ಆ ವಿಚಾರದಲ್ಲಿ ಏನೊಂದು ಹತೋಟಿಯನ್ನು ಅವರಿಟ್ಟುಕೊಳ್ಳುವುದಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ವನಸ್ಪತಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ತಾವು ಹೇಳಿರುವುದರಿಂದ, ಈ ವ್ಯಾಪಾರಗಾರರು ಬೇರೆಯವರ ಹೆಸರಿನಲ್ಲಿ ಈ ವೈಟ್ ಆಯಿಲ್‌ನ್ನು ತರಿಸಿಕೊಳ್ಳುತ್ತಿದ್ದಾರೆಂದು ನಂಬಿದ್ದೇನೆ. ಹೀಗೆಲ್ಲಾ ಮಾಡುತ್ತಿರುವುದರಿಂದ ಯಾವುದಾದರೂ ಸರಿಯಾದ ಉಪಾಯ ಮಾಡಿ ಹೀಗೆ ಬೆರಕೆ ಮಾಡುವುದನ್ನು ಪತ್ತೆ ಮಾಡಬೇಕಾಗಿದೆ. ಬೆರಕೆಯಾಗಿರುವುದನ್ನು ಬೇಕಾದರೆ ಸುಲಭವಾಗಿ ಪತ್ತೆಹಚ್ಚಬಹುದು. specific gravity ಮೇಲೆ ವ್ಯತ್ಯಾಸ ಗೊತ್ತಾಗಿಬಿಡುತ್ತದೆ. ಕೊಬ್ಬರಿ ಎಣ್ಣೆಯಲ್ಲಿ ಬೆರಕೆ ಮಾಡಿದ್ದರಂತೂ ಬಹಳ ಸುಲಭ ಅದು ಘನೀಭೂತವಾಗುವುದಿಲ್ಲ. ಆದ್ದರಿಂದ ಈ white oilನ್ನು ಯಾರು ಉಪಯೋಗಿಸುತ್ತಾರೆ, ಏಕೆ ಉಪಯೋಗಿಸುತ್ತಾರೆಂಬುದನ್ನು ನೋಡಿಕೊಂಡು ಕಡ್ಡಾಯವಾದ ನಿಬಂಧನೆಗಳಿಗೆ ಒಳಪಟ್ಟಂತೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಲೈಸೆನ್ಸ್ ಕೊಡಬೇಕೆಂದು ಹೇಳುವುದಲ್ಲದೆ ಹೋಟೆಲುಗಳಲ್ಲಿ ಯಾವುದೇ ರೂಪದಲ್ಲಾಗಲಿ ಇದನ್ನುಪಯೋಗಿಸುತ್ತಿದ್ದರೆ ಅದನ್ನು ಪತ್ತೆಹಚ್ಚಿ ಉಗ್ರವಾದ ಶಿಕ್ಷೆ ಮಾಡಬೇಕೆಂದು ಹೇಳುತ್ತೇನೆ.

ಮೂರನೆಯದಾಗಿ ಶ್ರೀಮಾನ್ ನಾರಾಯಣ ರಾಯರು ಹೇಳಿದಂತೆ ಇದನ್ನು ಉರಿಸುವುದಕ್ಕೆ ಉಪಯೋಗಿಸುವುದಿಲ್ಲ. ಏಕೆಂದರೆ ಗ್ಯಾಲನ್ನಿಗೆ 6ರೂಪಾಯಿ ಕೊಟ್ಟು ಯಾರೂ ಉರಿಸುವುದಿಲ್ಲ. ನಾರಾಯಣರಾಯರಂಥವರು ಬೇಕಾದರೆ ಉರಿಸಬಹುದು ಅಷ್ಟೆ. ಆದ್ದರಿಂದ ಇದನ್ನು ಪತ್ತೆ ಮಾಡುವುದು ಸುಲಭ. ಬಳೆ ಸೀಮೆ ಎಣ್ಣೆ ಮತ್ತು ಡೀಸಲ್ ಆಯಿಲ್ ಹಾಕಿ ಯಂತ್ರಗಳಿಗೆ ಉಪಯೋಗಿಸುವಾಗ ಸೀಮೆಎಣ್ಣೆ ಸಿಕ್ಕದೆಯಿರುವಾಗ ಇದನ್ನು ಅದಕ್ಕೆ ಬದಲಾಗಿ white oil ಸೇರಿಸಿ ಯಂತ್ರಗಳಿಗೆ ಹಾಕುತ್ತಿದ್ದರೆಂದು ಹೇಳುವುದು ಸರಿಯಿಲ್ಲ.

ಅಂತೂ ಈಗ ಯಾವುದಕ್ಕೂ ಉಪಯೋಗವಿಲ್ಲ. ಆದ್ದರಿಂದ ನಮ್ಮ ಸಂಸ್ಥಾನಕ್ಕೆ ಎಷ್ಟು ಆಮದಾಗುತ್ತಿದೆ, ಯಾರು ಆಮದು ಮಾಡುತ್ತಾರೆಂಬುದನ್ನು ತಾವು ಸ್ವಲ್ಪ ನೋಡಿಕೊಳ್ಳಬೇಕು. ಬರ್ಮಾಷೆಲ್ ಕಂಪೆನಿಯವರು ತರಿಸುತ್ತಾರೆಂದು ತಿಳಿದಿದ್ದೇನೆ. ಇದಕ್ಕೆಲ್ಲಾ ನಿಗಾಯಿಟ್ಟು ಇದರಿಂದ ಯಾವ ಯಾವ ರೀತಿ ಬೆರಕೆಗಳಾಗುತ್ತಿವೆಯೋ ಅದೆಲ್ಲವನ್ನೂ ತಪ್ಪಿಸಬೇಕು. ಕೊಬ್ಬರಿ ಎಣ್ಣೆಗೆ ಬೆರಕೆ ಮಾಡುವುದರಿಂದ ಏನು ಪರಿಣಾಮವಾಗುತ್ತದೆಂದು ನಾನು ಹೇಳಿದ್ದೇನೆ. ಎಂಥ ಅವಲಕ್ಷಣಕ್ಕೆ ಕಾರಣವಾಯಿತೆಂದು ತಿಳಿಸಿದ್ದೇನೆ. ಕೆಲವು ಹೇರ್‌ಆಯಿಲ್‌ಗಳಿಗೂ ಕೂಡ ಇದನ್ನು ಬೆರೆಸುತ್ತಾರಂತೆ. ಇದನ್ನು ತಾವು ತಪ್ಪಿಸಬೇಕು. ಹೆಲ್ತ್ ಆಫೀಸರು ತರದೂದು ಮಾಡಿ ಪತ್ತೆಹಚ್ಚದ ಹೊರತು ಜನರ ಆರೋಗ್ಯ ಉಳಿಯುವಹಾಗಿಲ್ಲ. ಜನರು ಪಾಪ ಭೀತಿಯಿಲ್ಲದೆ, ಆರೋಗ್ಯದ ಕಡೆಗೆ ಗಮನವಿಡದೆ ಲಾಭದ ಪಿಪಾಸೆಯಿಂದ ಅನ್ಯಾಯವಾಗಿ ಹಣವನ್ನು ಅರ್ಜನೆ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡುವುದು ತಪ್ಪು. ಆದಷ್ಟು ಬೇಗ ಪ್ರಯತ್ನಪಟ್ಟು ಸರ್ಕಾರದವರು ಇದನ್ನು ಪ್ರತಿಬಂಧಿಸಿದರೆ ದೇಶಕ್ಕೆ ಕ್ಷೇಮವಾಗುತ್ತದೆ. ಈ ದೃಷ್ಟಿಯಿಂದ ನನ್ನ ಸೂಚನೆಯನ್ನು ಸಭೆಯ ಮುಂದಿಟ್ಟು ಇದರ ಮೇಲೆ ಪ್ರತಿಬಂಧಕ ಹಾಕುವುದಕ್ಕೆ ಸರ್ಕಾರದವರಿಗೆ ಮಾನ್ಯ ಸದಸ್ಯರು ಅಧಿಕಾರ ಕೊಡಲೊಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Resolution moved.—

" ಸೋಲ್ ಏಜೆಂಟರುಗಳು ವರ್ತಕರುಗಳಿಗೆ ವೈಟ್ ಆಯಿಲ್ ಎಂಬ ಎಣ್ಣೆಯನ್ನು ಯಾವ ಹೆಸರಿನಿಂದಲೇ ಆಗಲಿ ಮಾರಾಟ ಮಾಡುವ ವಿಷಯದಲ್ಲಿ ವಿಶೇಷ ರೀತಿಯ ಲೈಸೆನ್ಸು ಇದ್ದ ಹೊರತು ಇದನ್ನು ಮಾರಾಟ ಮಾಡದಂತೆ ನಿರೋಧಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ. "

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ಅನುಮೋದಿಸುತ್ತಾ ಶ್ರೀಮಾನ್ ರಂಗರಾಮಯ್ಯನವರು ಇಂಥ ನಿರ್ಣಯವನ್ನು ತಂದಿದ್ದಕ್ಕಾಗಿ ಅವರಿಗೆ ವಂದನ ಬೇಕಾಗಿದೆ. ಅದಕ್ಕಿಂತಲೂ ಹೆಚ್ಚಾಗಿ ಈ ನಿರ್ಣಯ ಬ್ಯಾಲೆಟ್‌ನಲ್ಲಿ ಮೂರನೆಯ ನಿರ್ಣಯವಾಗಿ ಬರಮಾಡಿದ್ದಕ್ಕಾಗಿ ದೇವರನ್ನು ವಂದಿಸಬೇಕಾಗಿದೆ. ಕಾರಣವೇನೆಂದರೆ ಈ ವೈಟ್‌ಆಯಿಲ್ ಎಂಬುದು ಅಂಥಾ ದುಷ್ಪರಿಣಾಮ ತರವಾದ ವಸ್ತು. ಸಾಮಾನ್ಯವಾಗಿ ದಾವಣಗೆರೆಯಲ್ಲಿ ಇದರ ಹಾವಳಿಯನ್ನು ಹೇಳತೀರದು. ಇದು ಸಾಧಾರಣವಾಗಿ ರೈಲ್‌ನಲ್ಲಿ ಬರುವುದಿಲ್ಲ ಯಾವುದೋ ಬೇರೆ ಕಡೆಯಿಂದ ತರಿಸುತ್ತಿದ್ದಾರೆ. ಅಂತೂ ಈ ಎಣ್ಣೆ ಬಹಳ ಅಪಾಯಕರವಾದದ್ದು. ಆರೋಗ್ಯದ ಮೇಲೆ ಹೆಚ್ಚಿನ ದುಷ್ಪರಿಣಾಮ ಏನು ಮಾಡುತ್ತದೆಯೆಂಬುದು ಸರ್ಕಾರದವರ ಗಮನಕ್ಕೆ ಬಾರದೆ ಇಲ್ಲ. ಏಕೆಂದರೆ ಇದರ ಮೇಲೆ ಪ್ರತಿಬಂಧಕ ಹಾಕಿ ಬೆಂಗಳೂರಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಂದು ಆಜ್ಞೆಯನ್ನು ಹೊರಡಿಸಿದ ಹಾಗೆ ನನಗೆ ಜ್ಞಾಪಕವಿದೆ. ತುಮಕೂರಿನಲ್ಲೂ ಇದೇ ರೀತಿಯಾಗಿ ಒಂದು ಆರ್ಡರಿದೆಯೆಂದು ನನ್ನ ಮಾನ್ಯ ಸ್ನೇಹಿತರಾದ ಶ್ರೀ ಗೋವಿಂದರೆಡ್ಡಿಯವರು ಹೇಳುತ್ತಿದ್ದಾರೆ. ಆದ್ದರಿಂದ ಈಗ ಏನಾಗಿದೆಯೆಂದರೆ, ಸಂಸ್ಥಾನದಲ್ಲೆಲ್ಲಾ ಈ ಪ್ರಕಾರ ಒಂದೇ ವಿಧವಾದ ರೀತಿಯಲ್ಲಿ ಯಾವ ಆಜ್ಞೆಯನ್ನೂ ಮಾಡಿಲ್ಲ.

ವೈಟ್ ಆಯಿಲ್ ಎನ್ನುವುದು ಶ್ರೀ ರಂಗರಾಮಯ್ಯನವರು ಹೇಳಿದ ಹಾಗೆ ಬಣ್ಣವಿಲ್ಲದ್ದು, ವಾಸನೆಯಿಲ್ಲದ್ದು ಮತ್ತು ರುಚಿಯಿಲ್ಲದ್ದು, ನೀರು ಇದ್ದ ಹಾಗೆ ಇರುತ್ತದೆ. ಯಾವ ಊಟ ಮಾಡುವ ಎಣ್ಣೆಗೆ ಸೇರಿಸಿದರೂ ಪತ್ತೆ ಹಚ್ಚುವುದಕ್ಕಾಗುವುದಿಲ್ಲ. ನಮ್ಮೂರಿನ ಒಬ್ಬರು ಹೆಲ್ತ್ ಆಫೀಸರನ್ನು ಈ ವಿಚಾರದಲ್ಲಿ ಕೇಳಿದ್ದಕ್ಕೆ ಅವರೂ ಸಹ ಇದನ್ನು ಪತ್ತೆ ಹಚ್ಚುವುದಕ್ಕೆ

(ಶ್ರೀ ಎಚ್. ಸಿದ್ದವೀರಪ್ಪನವರು).

ಕಷ್ಟ, ಅದಕ್ಕೆಲ್ಲಾ ಸರಿಯಾದ ಲ್ಯಾಬೊರೇಟ್ಟರಿ ಇದ್ದು ಕೆಮಿಕಲ್ examination ನಡೆಸಬೇಕೆಂದು ಹೇಳಿದರು. ನಾನೇ ನಮ್ಮ ದಾವಣಗೆರೆ ಮುನಿಸಿಪಾಲಿಟಿಯಲ್ಲಿ ಇದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಬಹಳ ಪ್ರಯತ್ನಪಟ್ಟೆ. ಜನರಿಗೆ ವಿಷ ತಿನ್ನುಸುತ್ತಿದ್ದಾರೆಂದು ಹೇಳಿದರೂ ತಪ್ಪಾಗಲಾರದು, ಎರಡು ವರ್ಷದಿಂದ ಪ್ರಯತ್ನಪಟ್ಟಿದ್ದಾಯಿತು. ಇದು ಬಹಳ ಅಗ್ಗದ ಪದಾರ್ಥ. ಸಾಮಾನ್ಯವಾಗಿ ಕೊಬ್ಬರಿ ಎಣ್ಣೆ ಸುಲಭವಾಗಿ ಬೆರತುಕೊಳ್ಳುತ್ತದೆ. ಸೇಂಗ ಎಣ್ಣೆಯಲ್ಲಿ ಬೆರಸಿದರೆ ಸ್ವಲ್ಪವೂ ಗೊತ್ತೇ ಆಗುವುದಿಲ್ಲ ಮತ್ತು ತೂಕವೂ ಜಾಸ್ತಿ ಬರುತ್ತದೆ. ಲಾಭದ ದುರಾಸೆಯಿಂದ ಯಾವುದನ್ನೂ ಲೆಕ್ಕಿಸದೆ ಬೆರಸಿ ಮಾರುತ್ತಿದ್ದಾರೆ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ 100 ಜನರಲ್ಲಿ 5 ಜನರು ಹೋಟೆಲಿಗೆ ಹೋಗದೆ ಇರುವವರೇ ಅಂಪ ಮೇಲೆ ಶೇಕಡ 95 ಜನರು ಹೋಟಲಿಗೆ ಹೋಗಿ ಇಂಥ ಎಣ್ಣೆಯನ್ನು ತಿನ್ನುತ್ತಿದ್ದಾರೆ. ಮೈಗೆ ಹಚ್ಚಿಕೊಂಡರೂ ಯಾವುದೋ ಚರ್ಮ ರೋಗ ಬರುತ್ತದಂತೆ. ತಲೆಗೆ ಹಚ್ಚಿಕೊಂಡರೆ ಏನಾಗುತ್ತದೆಂದು ನಮ್ಮ ಮಿತ್ರರೇ ಹೇಳಿದ್ದಾರೆ; ಕಣ್ಣಿಗೂ ಬಹಳ ಅಪಾಯವಂತೆ. ಇಷ್ಟೆಲ್ಲಾ ಆದರೂ ಸರ್ಕಾರದವರು ಇದನ್ನೇಕೆ ಇನ್ನೂ ಗಮನಿಸಿಲ್ಲವೋ ಗೊತ್ತಿಲ್ಲ. ಅವರ ಹೆಲ್ತ್ ಇಲಾಖೆ ಏನು ಮಾಡುತ್ತದೆಯೋ ಗೊತ್ತಿಲ್ಲ. ಇಷ್ಟು ದಿವಸಗಳಾದರೂ ಪರೀಕ್ಷೆ ಮಾಡಿಸಿಲ್ಲಿವಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ, ಈ ವಿಚಾರದಲ್ಲಿ ಸ್ಥಳೀಯ ಸಂಸ್ಥೆಗಳವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕು. ಪಬ್ಲಿಕ್ ಹೆಲ್ತ್ ಆಕ್ಟಿನಲ್ಲಿ ಇಂಥವುಗಳನ್ನು ತಡೆಗಟ್ಟುವುದಕ್ಕೆ provision ಇದೆಯೆಂದು ನಾನು ತಿಳಿದಿದ್ದೇನೆ. Adulteration of food stuffs ಎಂಬ ಕಾನೂನಿನ ಪ್ರಕಾರ ಇದನ್ನು ತಡೆಯುವುದಕ್ಕೆ ಪ್ರಯತ್ನಮಾಡಬಹುದಾಗಿತ್ತು. ಆದರೂ ಅವರುಗಳು ಕಾನೂನು ಸ್ವಲ್ಪಮಟ್ಟಿಗೆ ಸಹಕಾರಿಯಾಗಿವೆಂದು ಹೇಳುತ್ತಿದ್ದಾರೆ. ಈ ಅಂಶವನ್ನು ತಾವು ಪರೀಕ್ಷೆ ಮಾಡಿಸಿ, ಶೀಘ್ರವಾಗಿ ಕಾರ್ಯಕ್ರಮ ಕೈಕೊಳ್ಳಬೇಕಾದ್ದು ಅವಶ್ಯಕ. ಶ್ರೀ ರಂಗರಾಮಯ್ಯನವರು ಹೇಳಿದ ಹಾಗೆ ಇದನ್ನು ತರಿಸಬೇಕಾದರೆ ಒಂದು ಪ್ರತಿಬಂಧಕವನ್ನು ಹಾಕಿ ಅತ್ಯಾವಶ್ಯಕವಾದ ಸಂದರ್ಭಗಳಲ್ಲಿ ಮಾತ್ರ ತರಿಸುವುದಕ್ಕೆ ಅವಕಾಶಕೊಡಬೇಕೆಂದು ಹೇಳುತ್ತೇನೆ. ಅತ್ಯಾವಶ್ಯಕವಾಗಿ ಯಾವ ಕೈಗಾರಿಕೆಗಳಿಗೆ ಬೇಕೋ ಅಂಥವುಗಳಿಗೆ ಮಾತ್ರ ಅವಕಾಶಕೊಟ್ಟು ಮಿಕ್ಕವುಗಳಿಗೆ ಪ್ರತಿಬಂಧಕ ಹಾಕಿ. ಒಂದುವೇಳೆ ಇದಕ್ಕೆ substitute ಯಾವುದಾದರೂ ಇದ್ದರೆ ಅದನ್ನು ತರಿಸುವಂತೆ ಮಾಡಬಹುದು. ಮುಖ್ಯವಾಗಿ ನಮ್ಮ ದೇಶದಲ್ಲಿ ವನಸ್ಪತಿಯವರು ಬಹಳ ಅನ್ಯಾಯಮಾಡುತ್ತಿದ್ದಾರೆಂದು ಹೇಳಬಹುದು. ಅಷ್ಟು ಕಠಿಣವಾಗಿ ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಅಂತೂ ಜನರ ಆರೋಗ್ಯಕ್ಕೆ ಬಹಳ ದುಷ್ಪರಿಣಾಮವನ್ನುಂಟುಮಾಡುತ್ತದೆಂದು ಹೇಳಿದರೆ ತಪ್ಪಾಗಲಾರದು.

ಸುಮಾರು ಇಲ್ಲಿಗೆ ಆರು ತಿಂಗಳ ಕೆಳಗೆ ಇಂಡಿಯಾ ಸರ್ಕಾರದವರು, ಈ ಆಹಾರ ಸಂಬಂಧವಾಗಿ ಒಂದು ಪ್ರೆಸ್ ಕಮ್ಯೂನಿಕ್ ಹೊರಡಿಸಿದ್ದುದನ್ನು ನಾನು ಓದಿ ನೋಡಿದ್ದೇನೆ. ಅದರಲ್ಲಿ ಹೀಗೆ ಹೇಳಿದೆ:—

"Adulteration of foodstuffs is not uncommon in the world but no where does it excel as it is done in India"

ಅದರಲ್ಲಿ ತಿಳಿಸಿರುವಂತೆ ನಾವು ಈಗ ಲೆಕ್ಕಹಾಕಿ ನೋಡಿದರೆ ನಮ್ಮ ಜನರಿಗೆ ಈ ದುಡ್ಡಿನ ಮೇಲಿನ ಒಂದು ವ್ಯಾಮೋಹದಿಂದ, ಆಸೆಯಿಂದ, ಜನರು ಏನು ಬೇಕಾದರೂ, ಎಂಥಾ ವಿಷವಸ್ತುಗಳನ್ನಾದರೂ ಈ ದಿವಸ ತಿನ್ನುವುದಕ್ಕೆ ತಯಾರಾಗಿದ್ದಾರೆ. ಆದುದರಿಂದ ಸರ್ಕಾರದವರು ಈ ಅಂಶಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ, ಜನರ ಆರೋಗ್ಯವನ್ನು ಕಾಪಾಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

*Janab **MAHMOOD SHARIFF** (Mysore *cum* Mandya *cum* Hassan—Muslim).—This question of ban on white oil was taken up by the Health Ministry about two years ago. There was some controversy about the nutritive value of Vanaspathi and then the Health Ministry appointed a Committee to go into the different ingredients contained in this Vanaspathi. While giving report upon that, they dealt with the white oil also, as to whether it was harmful to the health of the people or not. As a matter of fact a communication was received by us from the Centre two years ago to the effect that so far as white oil is concerned, it is very harmful and that it contains paraffin, kerosene and some other substances. Therefore we were instructed that the import of white oil must be prohibited and accordingly instructions were given to the Health Department. So far as the bad effect of this oil is concerned, it is conceded by all. What my friend wants is, if at all it must be sold it must be under a special licence. But what I say is, no special licence should be given. As a matter of fact, the oil is very bad. It contains paraffin, kerosene and some other articles. I request that it may be completely banned.

Sri **V. S. NARAYANA RAO**.—On a point of explanation.

ನಾನು 'ಮನೆಯಲ್ಲಿ ಎಂದು' ಹೇಳಿದೆನೆಂದು ಅವರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಹೇಳಿದ್ದು ಅಂಗಡಿಗೆ ಹೋಗಿ ಎಣ್ಣೆಯನ್ನು ತಂದರೆ, ಮನೆಗೂ ಕೊಡ ಆಗ ಈ ಬೆರಿಕೆ ಎಣ್ಣೆ ಉಪಯೋಗ ಅಗುತ್ತದೆ ಎಂದು.

The Hon'ble Sri **K. T. BHASHYAM**.—Regarding the deleterious effect of white oil, there is no controversy. White oil is an imported stuff. It is used in the manufacture of perfumery, particulary *javaji batti*. It is only for

that purpose that we allow white oil to be imported and it is being imported under strict conditions that the person who imports it should use it only for the purpose of perfumery. If it is found mixed with any food-tuff then we have got the power to punish the person who adulterates the foodstuff. Even that power we had not had formerly under the Prevention of Adulteration Act; we had not the power to proceed against a man who mixes this stuff with vegetable oils because under section 5 (1) (d) of the Act, we made mention of foods—milk, cream, cheese, but no vegetable oil had been mentioned. Hon'ble Members will remember that in the January Session we introduced a Bill to include vegetable oils among those foodstuffs which, if adulterated, would render a person liable for punishment and it was passed by this House and as soon as the Act comes into force, we will be able to proceed against any person who mixes white oil with any of these vegetable oils. "Vegetable oil" is defined under that Act. It means cocoanut oil, gingelly oil, groundnut oil and so on; so that there is power already vested in the Government to punish a person who mixes this white oil with any of the vegetable oils or with any foodstuffs. But there is one difficulty. It is a problem for us. It is a difficult thing to detect this white oil. It mixes easily with other stuffs and we cannot detect it.

Sri G. NARAYANA GOWDA.—What is the quantity imported?

The Hon'ble Sri K. T. BHASHYAM.—We have no statistics at present. We have called for them from the District Magistrates who are the licensing authorities.

Sri A. BHEEMAPPA NAIK.—How many *javaji batti* manufacturers there are and how much white oil is imported?

The Hon'ble Sri K. T. BHASHYAM.—Why not the Hon'ble Member hear me out? He will get answers to all his queries. Now it is under license granted by the District Magistrate that a person can import and use white oil. As to how much is being imported we have asked for information from each District Magistrate and some District Magistrates have yet to tell us. As soon as we get the figures we shall place them before the House. I believe it is a very small quantity that is being imported. In fact, it will be a very insignificant quantity which is needed for the manufacture of *javaji batti*. We shall any way examine it. I note that Hon'ble Members desire that white oil should not be used except for the manufacture of *javaji batti*. I will go one step further and say that if we can manufacture *javaji batti* with any other substitute we will do so rather than have the risk of white oil being imported for that purpose and used for a diffrent purpose altogether. We shall investigate the matter. My friend Sri Rangaramiah was speaking of specific gravity. It is impossible to detect white oil from the specific gravity test also; it is so difficult; it is a problem which is facing not merely the layman but even those who are in the line of detection. Even they are being baffled by this, because once you mix white oil with some other oil, it is difficult to detect it.

Sri H. SIDDAVEERAPPA.—The best thing would be to ban it altogether. We can do without *javaji batti*.

The Hon'ble Sri K. T. BHASHYAM.—Whether we can do without *javaji batti* or whether we can manufacture *javaji batti* with some other substitute, or whether in any case white oil can be banned, are matters which we will examine. We will find out whether the oil is necessary even if we allow it for *javaji batti*. If it is a very small quantity, we may afford to give it under proper conditions, that it shall be used only by the particular individual and for the particular purpose. If necessary, we shall ban it altogether. We shall investigate all this.

There is another difficulty. We can say that the oil should not be imported. They will import it under some other name. In no form should it be imported or used. We shall look into all these matters. How best we can check the import of this oil altogether into the State we shall consider. But this matter I did not know, nor was it brought to my notice and I looked through all the files that when white

(THE HON'BLE SRI K. T. BHASHYAM) oil is used mixed with hair oil ladies lose their hair. I did not know it. I am obliged to the Hon'ble Mover of the Resolution and for his keen sense of observation in the matter. We shall see as soon as we can, how this white oil menace can be combated.

Sri H. SIDDAVEERAPPA.—Cannot the local bodies be moved to take necessary steps to prevent adulteration.

The Hon'ble Sri K. T. BHASHYAM.—When we are thinking of banning it altogether, there is perhaps no need to do so.

Sri S. RANGARAMIAH.—I seek the permission of the House to withdraw my resolution.

The resolution was, by leave of the House withdrawn.

Resolution No. 4

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ನಾನು ಈ ನಿರ್ಣಯವನ್ನು ಮಂಡಿಸಲು ಇಷ್ಟಪಡುವುದಿಲ್ಲ.

RESOLUTION No. 5

Plea for abolition of Food Control and Rationing in all areas in the State except in cities of Bangalore, Mysore, Davangere and K. G. F.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ:—

"ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶ—ಈ ಸಿಟಿಗಳಲ್ಲಿ ಹೊರತು, ಸಂಸ್ಥಾನದ ಇತರ ಎಲ್ಲಾ ಪ್ರದೇಶಗಳಲ್ಲಿಯೂ ಆಹಾರದ ಹತೋಟಿಯನ್ನೂ ಮತ್ತು ಆಹಾರ ಧಾನ್ಯಗಳ ಪಡಿತರದ 'ರೇಷನಿಂಗ್' ಪದ್ಧತಿಯನ್ನೂ, ವಜಾಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ".

ಸ್ವಾಮಿ, 1943ನೆಯ ಇಸವಿಯಿಂದ ನಾವು ಆಹಾರದ ನಿಯಂತ್ರಣವನ್ನಿಟ್ಟುಕೊಂಡು ಅದರ ಸಾಧಕ ಬಾಧಕಗಳನ್ನು ಸಂಪೂರ್ಣವಾಗಿ ಅನುಭವಿಸಿದ್ದೇವೆಂದು ತಿಳಿದುಕೊಂಡಿದ್ದೇನೆ. ಒಂದು ವಿಷಯ ನಮ್ಮ ಅನುಭವದಿಂದ ಸ್ಪಷ್ಟಪಟ್ಟಿದೆ. ಅದೇನೆಂದರೆ, ನಮ್ಮ ದೇಶದಲ್ಲಿರತಕ್ಕಂಥ ಅನೀತಿಯುತವಾದ ವಾತಾವರಣದಲ್ಲಿ ನಿಯಂತ್ರಣ ವ್ಯವಸ್ಥೆಯನ್ನು ಈಗಿರುವುದಕ್ಕಿಂತಲೂ ತೃಪ್ತಿಕರವಾದ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಹತೋಟಿ ವ್ಯವಸ್ಥೆಯನ್ನು ಯಶಸ್ವಿಯಾಗಿ ನಡೆಸಬಹುದು. ಅದಕ್ಕೆ ಬಹಳಮಟ್ಟಿಗೆ ಅಲ್ಲಿರುವ ಜನರ ದೇಶಾಭಿಮಾನ ಮತ್ತು ಸ್ವಾರ್ಥತ್ಯಾಗ ಕಾರಣವೆಂದು ಹೇಳಬಹುದು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಹಿಂದೆ ಒಂದುಸಾರಿ ಇಂಗ್ಲೆಂಡಿನಲ್ಲಿ ಸರ್ಕಾರದ ಡಿಪೋನಲ್ಲಿ ಸಕ್ಕರೆಯಿರಲಿಲ್ಲ. ಆಗ ಹೆಚ್ಚಾಗಿ ಸಕ್ಕರೆಯನ್ನು ಹೊಂದಿರುವವರು ಸರ್ಕಾರಿ ಡಿಪೋಗೆ ಅದನ್ನು ಒಪ್ಪಿಸಬೇಕೆಂದು ಹೇಳಿದರಂತೆ. ಅದಕ್ಕೆ ಒಂದು ಆಜ್ಞೆ ಜಾರಿಯಾದ ಕೂಡಲೆ ಜನರು ತಮ್ಮಲ್ಲಿದ್ದ ಸಕ್ಕರೆಯನ್ನು ತೆಗೆದುಕೊಂಡು ಬಂದು ಕ್ಯೂ ನಿಂತು ಡಿಪೋಕ್ಕೆ ಸಕ್ಕರೆಯನ್ನು ಕೊಡುತ್ತಿದ್ದರಂತೆ. ಬಹುಶಃ ಆ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗುವುದಕ್ಕೆ ಶತಮಾನಗಳು ಕಳೆಯಬೇಕೆಂಬ ಭಾವನೆಯಿದೆ. ಆದ್ದರಿಂದ ನಮ್ಮ ದೇಶದ ನೀತಿ ಮಟ್ಟವು ಉತ್ತಮವಾಗುವವರೆಗೆ ಹತೋಟಿಯು ಸಮರ್ಪಕವಾದ ರೀತಿಯಲ್ಲಿ ನಡೆಯಲು ಸಾಧ್ಯವಾಗುವುದಿಲ್ಲ.

ಇನ್ನು ಆಹಾರದ ಹತೋಟಿ ಆಜ್ಞೆಗಳ ಸಾಧಕ ಬಾಧಕಗಳನ್ನು ಪರಿಶೀಲಿಸಬೇಕಾದ್ದು ಅಗತ್ಯ. ಒಂದು ಮಾತನ್ನು ಹೇಳುವುದಾದರೆ ಹತೋಟಿಯಿಂದ ಬೆಳೆಯುವವನಿಗೂ ತೃಪ್ತಿಯಿಲ್ಲ, ಕೊಳ್ಳುವವನಿಗೂ ತೃಪ್ತಿಯಿಲ್ಲ. ಇಬ್ಬರೂ ಸರ್ಕಾರವನ್ನು ಬಯ್ಯುತ್ತಾರೆ. ರೈತರು ಒಂದುಕಡೆ, ಕೊಳ್ಳುವವರು ಒಂದುಕಡೆ ಬಯ್ಯುತ್ತಿದ್ದಾರೆ. ಕೊಳ್ಳುವವರ ದೃಷ್ಟಿಯಿಂದ ಹೇಳುವುದಾದರೆ ಈಗ ಸರ್ಕಾರದವರು ಸ್ಟ್ಯಾಚ್ಯೂಟರಿ ರೇಷನಿಂಗ್, ಇನ್‌ಫಾರ್ಮಲ್ ರೇಷನಿಂಗ್ ಅಥವಾ ರೂರಲ್ ರೇಷನಿಂಗ್ ಎಂದು ಮಾಡಿದ್ದಾರೆ. ರೂರಲ್ ರೇಷನಿಂಗ್ ಇರುವ ಕಡೆ ಬಹಳ ಕಷ್ಟ. ಅಲ್ಲಿನ ಡಿಪೋಗಳಲ್ಲಿ ಕೊಳ್ಳುವವನಿಗೆ ಆಹಾರ ದವಸ ಸಿಕ್ಕುವುದೇ ಇಲ್ಲ ಎಂದು ಸಾಮಾನ್ಯವಾಗಿ ಹೇಳಬಹುದು. ಇನ್ನು ಸ್ಟ್ಯಾಚ್ಯೂಟರಿ ರೇಷನಿಂಗ್ ಇರುವ ಕಡೆ ಶೇಕಡ 75 ಜನರು ಕಾಳಸಂತೆಯಿಂದ ಮತ್ತು ಬೇರೆ ರೀತಿಯಲ್ಲಿ ದವಸ ತರಿಸಿಕೊಂಡು ರೇಷನ್ ಜೊತೆಗೆ ಸರಿಪಡಿಸಿಕೊಳ್ಳುತ್ತಿದ್ದಾರೆ. ರೇಷನ್ ಕೊಡುವುದು ಸಾಲುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಶೇಕಡ 50 ಜನರು ಕಾಳಸಂತೆಯಲ್ಲಿ ಆಹಾರ ದವಸವನ್ನು ಕೊಂಡುಕೊಳ್ಳುತ್ತಿದ್ದಾರೆ. ಅದು ಸಾಧ್ಯವಿಲ್ಲದಿರುವವರು ಹೊಟೇಲುಗಳಿಗೆ ಹೋಗಿ ತಿನ್ನುತ್ತಿದ್ದಾರೆ. ಆದ್ದರಿಂದ ಕೊಳ್ಳುವವರ ದೃಷ್ಟಿಯಿಂದ ನೋಡಿದರೆ ಈ ನಿಯಂತ್ರಣದಿಂದ ಪ್ರಯೋಜನವಾಗುತ್ತಿಲ್ಲ. ಬೆಂಗಳೂರು ಸಿಟಿಯಲ್ಲಿ ರೂಪಾಯಿಗೆ ಒಂದು ಸೇರಿನಂತೆ ಕಾಳಸಂತೆಯಲ್ಲಿ ಈಗಲೂ ಸಹ ಕೊಳ್ಳುತ್ತಿದ್ದಾರೆಂದು ಕೇಳುತ್ತೇನೆ. ಕೊಳ್ಳುವವರ ದೃಷ್ಟಿಯಿಂದ ಇಷ್ಟು ಕಷ್ಟವಿದೆ.

ಇನ್ನು ಬೆಳೆಯುವವರ ದೃಷ್ಟಿಯಿಂದ ನೋಡೋಣ. 1943ರಿಂದ ಕಂಟ್ರೋಲ್ ಬಂದಮೇಲೆ ರೈತರಿಗೆ ಬಹಳ ಕಷ್ಟವಾಗಿದೆ. ಶ್ಯಾನುಭೋಗರಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೂ ಎಲ್ಲ ಅಧಿಕಾರಿಗಳೂ ರೈತರನ್ನು ಹಿಂಸೆಮಾಡುತ್ತಿದ್ದಾರೆ. ಇಲಾಖಾ ನೌಕರರು, ಫುಡ್ ಇನ್‌ಸ್ಪೆಕ್ಟರು ಮತ್ತು ಇತರ ಸಣ್ಣಪುಟ್ಟ ಅಧಿಕಾರಿಗಳು ನಾನಾ ರೀತಿಯಲ್ಲಿ ಕಷ್ಟ ಕೊಡುತ್ತಾರೆ. ಬತ್ತವನ್ನು ಅಕ್ಕಿ ಮಾಡಿಸಬೇಕಾದರೆ ಕಷ್ಟ. ದವಸವನ್ನು ಸಾಗಿಸುವುದು ಕಷ್ಟ. ಅನೇಕ ಕಡೆ ಇದಕ್ಕೆ ಪರ್ಮಿಟ್ ಪಡೆಯಬೇಕಾದರೆ ರೆವೆನ್ಯೂ ಇನ್‌ಸ್ಪೆಕ್ಟರು ವಗೈರೆ ಅಧಿಕಾರಿಗಳ ಬಳಿಗೆ ಹತ್ತಾರು ಸಾರಿ ತಿರುಗಬೇಕು. ಒಂದು ಸಲ ಹೋದರೆ ಕೆಲಸವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಇದಕ್ಕೆ ಸ್ವಲ್ಪ ವೆಚ್ಚಮಾಡಬೇಕಾಗಿದೆಯೆಂದೂ ಕೇಳಿದ್ದೇನೆ.